ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳೀಮಠ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಕರ್ನಾಟಕ ರಾಜ್ಯ, (ಪೊಲೀಸು ಉಪನಿರೀಕ್ಷಕ, ಮೂಡಬಿದ್ರಿ ಮೂಲಕ) -ವಿರುದ್ಧ ಶ್ರೀ ವಿಶ್ವನಾಥ ದೇವಾಡಿಗ ಮತ್ತು ಇನ್ನೊಬ್ಬರು

ಕ್ರಿಮಿನಲ್ ಅಪೀಲುಸಂಖ್ಯೆ: 770/2013, ದಿನಾಂಕ 29 ನೇ ಆಗಸ್ಟ್, 20

ತೀರ್ಪು

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

ಈ ಅಪೀಲನ್ನು, II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ದಕ್ಷಿಣ ಕನ್ನಡ ಮಂಗಳೂರು ಇವರ ಕಡತದ ದಿನಾಂಕ 14.02.2013 ರ ಕ್ರಿಮಿನಲ್ ಅಪೀಲು ಸಂ .45/2006 ರಲ್ಲಿ ಹೊರಡಿಸಿದ ಖುಲಾಸೆ ತೀರ್ಪನ್ನು ಪ್ರಶ್ನಿಸಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಹಾಗೂ ಜೆಎಂಎಫ್ಸಿ ಮೂಡಬಿದ್ರಿ ಇವರು ಸಿ.ಸಿ. ಸಂ .27/2004 ರಲ್ಲಿ ಹೊರಡಿಸಿದ ದಿನಾಂಕ 20.01.2006 ರ ತೀರ್ಪನ್ನು ದೃಢಪಡಿಸಲು ಕೋರಿ ಹಾಗೂ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳಲ್ಲಿ ಮಾನ್ಯ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ಇತರ ಆದೇಶವನ್ನು ಹೊರಡಿಸಲು ಕೋರಿ ಈ ಅಪೀಲನ್ನು ಹೂಡಲಾಗಿದೆ.

2. ಈ ಪ್ರಕರಣದ ಸಂಕ್ಷಿಪ್ತ ಸಂಗತಿಗಳೇನೆಂದರೆ, ದಿನಾಂಕ 17.02.1999 ರಂದು ಮಧ್ಯಾಹ್ನ ಸುಮಾರು 3 ಗಂಟೆಗೆ ಮೊದಲ ಮಾಹಿತಿದಾರ ಯಶೋನಂದ ಮೂಲ್ಯರವರು, ತಾನು ತನ್ನ ಕುಟುಂಬ, ತನ್ನ ಸಹೋದರ ವಿಶ್ವನಾಥ ಹಾಗೂ ಆತನ ಪತ್ನಿ ಹರಿಣಾಕ್ಷಿಯೊಟ್ಟಿಗೆ ಪೇಪರ್ ಮಿಲ್ ಹೊಸಬೆಟ್ಟು ಗ್ರಾಮದ ಬಳಿ ವಾಸಿಸುತ್ತಿದ್ದೆನೆಂದು ಹೇಳಿಕೆ ನೀಡಿದ್ದಾನೆ.ಆ ದಿನದಂದು, ದೂರುದಾರನು ತನ್ನ ಸಹೋದರ ವಿಶ್ವನಾಥ ಎಂದರೆ ಆಪಾದಿತ ಸಂ .1 ರ ಮನೆಯಲ್ಲಿದ್ದನು.ಅವನ ಮನೆಯಲ್ಲಿ, ಅವನ ಪತ್ನಿ ಹರಿಣಾಕ್ಷಿ, ಅವನ ಸಹೋದರಿ ಭವಾನಿ ಎಂದರೆ ಆಪಾದಿತ ಸಂ .2 ಹಾಗೂ ಅವಳ ಮಗಳು ಯಶೋಧ ಇದ್ದರು.1 ನೇ ಸಂಖ್ಯೆಯ ಆಪಾದಿತನು ಕೊಠಡಿಯಲ್ಲಿದ್ದನು.ದೂರುದಾರ ಹಾಗೂ ಆತನ ಸಹೋದರಿ ಭವಾನಿ ನಡುವೆ ಸ್ಥಿರಾಸ್ತಿಯನ್ನು ಭಾಗ ಮಾಡುವ ವಿಷಯದಲ್ಲಿ ವಾಗ್ವಾದ ನಡೆದಿತ್ತು.ಅದೇ ಸಮಯದಲ್ಲಿ 1 ನೇ ಸಂಖ್ಯೆಯ ಆಪಾದಿತನು ಮನೆಯಿಂದ ಹೊರಬಂದು ದೂರುದಾರನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾನೆ.ಈ ನಡುವೆ 2 ನೇ ಸಂಖ್ಯೆಯ ಆಪಾದಿತಳು ಒಳಗಡೆಯಿಂದ ಕುಡುಗೋಲನ್ನು ತಂದು ಆತನ ಕೈಗಳು ಹಾಗೂ ಕಾಲುಗಳ ಮೇಲೆ ಹಲ್ಲೆ ನಡೆಸಿದ್ದು ರಕ್ತಸ್ರಾವ ಗಾಯಗಳಾಗಿವೆ.ಇದರ ಪರಿಣಾಮವಾಗಿ ದೂರುದಾರನು ಕೆಳಗೆ ಬಿದ್ದಿದ್ದಾನೆ.2 ನೇ ಸಂಖ್ಯೆಯ ಆಪಾದಿತಳು ಅಲ್ಲಿಗೆ ಬಂದು ದೇಹದ ಎಲ್ಲಾ ಭಾಗಗಳ ಮೇಲೆ ಪುನಃ ಹಲ್ಲೆ ನಡೆಸಿದ್ದಾಳೆ.ಅವನು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪೊಲೀಸರನ್ನು ವಿನಂತಿಸಿದ್ದಾನೆ.

3. ಪೊಲೀಸರಿಗೆ ನೀಡಿದ ಮಾಹಿತಿಯನ್ನು ಆಧರಿಸಿ, ಪೊಲೀಸರು, ಭಾರತ ದಂಡ ಸಂಹಿತೆಯ 34 ಇದರೊಂದಿಗೆ ಓದಲಾದ 324 ಹಾಗೂ 326 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಆಪಾದಿತರಿಬ್ಬರ

ವಿರುದ್ಧ ಪ್ರಕರಣವನ್ನು ದಾಖಲಿಸಿದರು. ಪೊಲೀಸರು ಸ್ಥಳ ಮಹಜರು ನಡೆಸಿ ಕರ್ನಾಟಕ ರಾಜ್ಯ, (ಪೊಲೀಸು ಉಪನಿರೀಕ್ಷಕ, ಮೂಡಬಿದ್ರಿ ಮೂಲಕ) -ವಿರುದ್ಧ ಶ್ರೀ ವಿಶ್ವನಾಥ ದೇವಾಡಿಗ ಮತ್ತು ಇನ್ನೊಬ್ಬರು

ಸ್ಥಳ ನಕ್ಷೆಯನ್ನೂ ಸಹ ರೂಪಿಸಿದ್ದಾರೆ ಹಾಗೂ ಸಾಕ್ಷಿದಾರರ ಹೇಳಿಕೆಯನ್ನು ಕೂಡ ದಾಖಲಿಸಿದ್ದಾರೆ.ದಸ್ತಾವೇಜುಗಳನ್ನು ಸಂಗ್ರಹಿಸಿದ ತರುವಾಯ, ತನಿಖೆಯನ್ನು ಪೂರ್ಣಗೊಳಿಸಿ, ಪೊಲೀಸರು ಮೇಲಿನ ಅಪರಾಧಗಳಿಗಾಗಿ ಆಪಾದಿತ ವ್ಯಕ್ತಿಗಳ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.

4. ಆಪಾದಿತನು ತನ್ನೊಪ್ಪಿಕೊಂಡಿರಲಿಲ್ಲ, ಹೀಗಾಗಿ ಪ್ರಾಸಿಕ್ಯೂಷನ್ನು ಪ್ರಾ.ಸಾ .1 ರಿಂದ 8 ರವರೆಗಿನ ಸಾಕ್ಷಿದಾರರೆಂದು ವಿಚಾರಣೆ ನಡೆಸಿ, ನಿಶಾನೆ ಪಿ .1 ರಿಂದ 14 ರವರೆಗಿನ ದಸ್ತಾವೇಜುಗಳನ್ನು ಹಾಗೆಯೇ 1 ರಿಂದ 3 ರವರೆಗಿನ ಮುದ್ದೆಮಾಲನ್ನು ಸಹ ಗುರುತು ಹಾಕಲಾಗಿದೆ.ಆಪಾದಿತ ವ್ಯಕ್ತಿಗಳು ತಮ್ಮ ವಿರುದ್ಧ ಲಭ್ಯವಿರುವ ಚಿತಾವಣೆ ಮಾಡಿರುವ ಮಾಹಿತಿಯನ್ನು 313 ಹೇಳಿಕೆಗೆ ಒಳಪಡಿಸಲಾಗಿದೆ.ಆಪಾದಿತ ವ್ಯಕ್ತಿಗಳಲ್ಲಿ ಒಬ್ಬರನ್ನು ಪ್ರತಿವಾದಿ ಸಾಕ್ಷ್ಯವೆಂದೂ ಸಹ ವಿಚಾರಣೆ ಮಾಡಲಾಗಿದೆ.

5. 1 ನೇ ಸಂಖ್ಯೆಯ ಆಪಾದಿತನು ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಮೇರೆಗೆ ತನ್ನ ಹೇಳಿಕೆಯಲ್ಲಿ, ಪ್ರಾ.ಸಾ .2, ತನ್ನ ಮನೆಗೆ ಪ್ರಾ.ಸಾ .3 ರೊಟ್ಟಿಗೆ ಬಂದಿದ್ದು, ಆ ಸಮಯದಲ್ಲಿ ಪ್ರಾ.ಸಾ .2 ಕುಡುಗೋಲನ್ನು ಹೊಂದಿದ್ದರು ಎಂದು ಹೇಳಿಕೆ ನೀಡಿದ್ದಾನೆ.ಪ್ರಾ.ಸಾ .2 ಆಸ್ತಿಯನ್ನು ಪಾಲು ಮಾಡಲು ಒತ್ತಾಯಿಸಿದ್ದು, ಭಾಗವನ್ನು ಮಾಡದಿದ್ದರೆ ಕೈಕಾಲು (limbs) ಕತ್ತರಿಸುವುದಾಗಿ ಬೆದರಿಕೆ ಹಾಕಿದ್ದಾನೆ.ಇದಾದ ನಂತರ ಪ್ರಾ.ಸಾ .2, ಕುಡುಗೋಲಿನಿಂದ 2 ನೇ ಸಂಖ್ಯೆಯ ಆಪಾದಿತಳನ್ನು ಥಳಿಸಿದ್ದಾನೆ.ಈ ನಡುವೆ ನೇ ಸಂಖ್ಯೆಯ ಆಪಾದಿತನು ಪ್ರಾ.ಸಾ .2 ರ ಕೈಗಳನ್ನು ತಳ್ಳಿದ್ದಾನೆ, ಪರಿಣಾಮವಾಗಿ ಕುಡುಗೋಲು ಕೆಳಗಡೆಗೆ ಬಿದ್ದಿದೆ.2 ನೇ ಸಂಖ್ಯೆಯ ಆಪಾದಿತನು ಸದರಿ ಕುಡುಗೋಲನ್ನು ಎತ್ತಿಕೊಂಡಿದ್ದಾನೆ.2 ನೇ ಸಂಖ್ಯೆಯ ಆಪಾದಿತನನ್ನು, ಪ್ರಾ.ಸಾ .1 ಥಳಿಸಲು ಪ್ರಯತ್ನಿಸಿದ್ದನು ಹಾಗೂ ಅವಳು ತನ್ನನ್ನು ರಕ್ಷಿಸಿಕೊಳ್ಳಲು ಕುಡುಗೋಲನ್ನು ಹಿಡಿದುಕೊಂಡಿದ್ದಳು.ಹೀಗಾಗಿ, ಪ್ರಾ.ಸಾ .2 ಕ್ಕೆ ಗಾಯಗಳಾಗಿವೆ.2 ನೇ ಸಂಖ್ಯೆಯ ಆಪಾದಿತಳು ಕೂಡ ದಂಡ ಪ್ರಕ್ರಿಯಾ ಸಂಹಿತಿಯ 313 ನೇ ಪ್ರಕರಣದ ಮೇರೆಗೆ ಇದೇ ಹೇಳಿಕೆಯನ್ನು ನೀಡಿದ್ದಾಳೆ.ಪ್ರತಿವಾದಿ ಸಾಕ್ಷ್ಯನ್ನು ಎಂದರೆ 2 ನೇ ಸಂಖ್ಯೆಯ ಆಪಾದಿತಳ ಮಗಳನ್ನು ವಿಚಾರಣೆ ಮಾಡದ ಹೊರತು 1 ಹಾಗೂ 2 ನೇ ಸಂಖ್ಯೆಯ ಆಪಾದಿತರು ಕಟಕಟೆ ಒಳಗಡೆ ಹೋಗಲು ನಿರ್ಧರಿಸಿರಲಿಲ್ಲ.

6. ಅಧಿವಿಚಾರಣಾ ನ್ಯಾಯಾಲಯವು, ಇಬ್ಬರೂ ವಕೀಲರ ವಾದಗಳನ್ನು ಸುನಾವಣೆ ಮಾಡಿದ ನಂತರ, ಭಾರತ ದಂಡ ಸಂಹಿತೆಯ 34 ರೊಂದಿಗೆ ಓದಲಾದ 324 ಹಾಗೂ 326 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಿತು.ಆಪಾದಿತನನ್ನು, ಎರಡು ವರ್ಷಗಳ ಕಾರಾವಾಸ ಹಾಗೂ ಪ್ರತಿಯೊಬ್ಬರಿಗೆ 1,000/- ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡುವ ಶಿಕ್ಷೆಗೆ ಒಳಪಡಿಸಲಾಯಿತು.ಅಪರಾಧ ನಿರ್ಣಯದ ತೀರ್ಪಿನಿಂದ ಹಾಗೂ ಶಿಕ್ಷೆಯಿಂದ ಬಾಧಿತರಾದ ಎದುರುದಾರರು, II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ, ದಕ್ಷಿಣ ಕನ್ನಡ ಮಂಗಳೂರು ಇವರ ಮುಂದೆ ಕ್ರಿಮಿನಲ್ ಅಪೀಲು ಸಂ. 45/2006 ರಲ್ಲಿ ಇಲ್ಲಿ ಅಪೀಲನ್ನು ಹೂಡಿದರು.ಅಪೀಲು ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯಾಧಾರವನ್ನು ಪರಿಗಣಿಸಿದ ತರುವಾಯ ಇಲ್ಲಿ ಇಬ್ಬರೂ ಎದುರುದಾರರನ್ನು ಖುಲಾಸೆಗೊಳಿಸಿತು.

7. ಖುಲಾಸೆಯ ತೀರ್ಪಿನಿಂದ ಬಾಧಿತವಾದ ರಾಜ್ಯ ಸರ್ಕಾರವು ಪ್ರಸ್ತುತ ಅಪೀಲನ್ನು ಸಲ್ಲಿಸಿದ್ದು, ಸಾಕ್ಷಿದಾರರು, ಆಪಾದಿತ ವ್ಯಕ್ತಿಗಳು ಮಾಡಿದ ಪ್ರತ್ಯಕ್ಷ ಕೃತ್ಯಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ತಿಳಿಸಿದ್ದಾರೆ ಹಾಗೂ ಇತರ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಪುಷ್ಟಿಕರಣ ನೀಡುವ ಗಾಯದ ಸಾಕ್ಷ್ಯ ಲ್ಯು ಹಾಗೂ ವೈದ್ಯರ ಸಾಕ್ಷ್ಯವನ್ನು ನಂಬದೇ ಮಾನ್ಯ II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಎದುರುದಾರರನ್ನು ಖುಲಾಸೆಗೊಳಿಸಿ ಲೋಪವೆಸಗಿರುವರೆಂದು ವಾದಿಸಿದೆ.

8. ಮಾನ್ಯ II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಸಿವಿಲ್ ನ್ಯಾಯಾಧೀಶರು ಮಾಡಿದ ಅಭಿಪ್ರಾಯೋಕ್ತಿಗಳನ್ನು ನೋಡಲು ಹಾಗೂ ಸರ್ವೋಚ್ಚ ನ್ಯಾಯಾಲಯವು, ಗಾಯಗೊಂಡ ಸಾಕ್ಷಿದಾರನ ಸಾಕ್ಷ್ಯವು ಸಾಮಾನ್ಯವಾಗಿ ಪಂಕ್ತಿಯಲ್ಲಿ ಮೇಲ್ಮಟ್ಟದ್ದಲಿರಬೇಕು ಎಂಬುದನ್ನು ನೋಡಲು ವಿಫಲರಾಗಿದ್ದಾರೆ ಹಾಗೂ ಅದೃಷ್ಟವಶಾತ್ ಉಳಿದುಕೊಂಡ ಗಾಯಗೊಂಡ ಸಾಕ್ಷಿದಾರನ ಕಡೆಯಿಂದ ಸಣ್ಣಪುಟ್ಟ ವ್ಯತ್ಯಾಸಗಳು ಇದ್ದರೂ ಕೂಡ ಅವನು ನಿಜವಾದ ಅಪರಾಧಿ ಆಗಿರುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.ಪ್ರಕರಣವನ್ನು ಪ್ರಾಸಿಕ್ಯೂಷನ್ಗೆ ಅನುಕೂಲವಾಗಿ ಮಾಡಲು ಗಾಯಗೊಂಡ ಸಾಕ್ಷಿದಾರನ ಸಾಕ್ಷ್ಯವೇ ಸಾಕಷ್ಟಾಗಿರುತ್ತದೆ ಎಂಬುದು ಸುಸ್ಥಾಪಿತ ತತ್ವವಾಗಿದೆ.ಪ್ರಾ.ಸಾ .2 ಯಶೋನಂದ ಮೂಲ್ಯ, ತಾನು ರಕ್ತ ಸೋರುವ ಗಾಯಗಳಿಂದ ಆಪಾದಿತನ ಮನೆಯ ಪ್ರಾಂಗಣದ ನೆಲದಲ್ಲಿ ಬಿದ್ದಿದ್ದೆನೆಂದು ಹೇಳಿಕೆ ನೀಡಿದ್ದಾನೆ.ಪ್ರಾ.ಸಾ .2 ಯೋಚಿಸಲು ಹಾಗೂ ತಪ್ಪು ಹೇಳಲು ಹಾಗೂ ಆಪಾದಿತನನ್ನು ಸಿಕ್ಕಿಸುವ ಕಲ್ಪನಾತ್ಮಕ ಕಥೆ ಹೇಳಲು ಸಮಯ ಇರಲಿಲ್ಲ.ಪ್ರಾ.ಸಾ .2 ರ ಸಾಕ್ಷ್ಯವು ಸಂಗತವಾಗಿದ್ದು ನಿಶಾನೆ ಪಿ .3 ರ ವಸ್ತುವಿನೊಂದಿಗೆ ಅನುರೂಪವಾಗಿದೆ.ಅವನ ಸಾಕ್ಷ್ಯವನ್ನು ನಂಬದಿರುವುದಕ್ಕೆ ಯಾವುದೇ ಕಾರಣವಿಲ್ಲ.ಅಪೀಲು ನ್ಯಾಯಾಲಯವು, ಸಾಕ್ಷ್ಯವನ್ನು ಯುಕ್ತವಾಗಿ ಗ್ರಹಿಸಿಲ್ಲ ಹಾಗೂ ದೋಷಯುಕ್ತವಾಗಿ ಎದುರುದಾರರನ್ನು ಖುಲಾಸೆಗೊಳಿಸಿದೆ.ಹೀಗಾಗಿ ಖುಲಾಸೆಯ ತೀರ್ಪನ್ನು ತಳ್ಳಿ ಹಾಕಬೇಕೆಂದು ರಾಜ್ಯವು ಈ ನ್ಯಾಯಾಲಯವನ್ನು ಕೋರಿಕೊಂಡಿದೆ.

9. ರಾಜ್ಯ ಸರ್ಕಾರಿ ಅಭಿಯೋಜಕರು ಕೂಡ, ಘಟನೆಯ ಸಂಬಂಧದಲ್ಲಿ ಯಾವುದೇ ವಿವಾದವಿರುವುದಿಲ್ಲವೆಂದು ಹಾಗೂ ಘಟನೆ ಕುರಿತು ಎದುರುದಾರರಿಗೆ ಯಾವುದೇ ವಿವಾದವಿಲ್ಲವೆಂದು ವಾದಿಸಿದ್ದಾರೆ.ಅವರ ಮನವಿಯು ವೈಯಕ್ತಿಕವಾದುದಾಗಿದೆ.ಎದುರುದಾರರು ಪ್ರತ್ಯೇಕ ಪ್ರತಿವಾದದ ಸಮರ್ಥನೆಯ ಮನವಿಯನ್ನು ತೆಗೆದುಕೊಂಡಾಗ, ಪ್ರತ್ಯೇಕ ಪ್ರತಿವಾದದ ಸಮರ್ಥನೆಯ ಪ್ರಯೋಗ ವಾರಂಟಿನ ಸನ್ನಿವೇಶಗಳನ್ನು ರುಜುವಾತುಪಡಿಸುವ ಜವಾಬ್ದಾರಿ ಅವರದಾಗುತ್ತದೆ.ಅದನ್ನು ಮಾಡಿರುವುದಿಲ್ಲ.ಮಾನ್ಯ ರಾಜ್ಯ ಸರ್ಕಾರಿ ಅಭಿಯೋಜಕರು, ಪ್ರತ್ಯೇಕ ಪ್ರತಿವಾದವನ್ನು ಪ್ರಯೋಗಿಸುವ ಸಂದರ್ಭವಿರಲಿಲ್ಲವೆಂಬುದನ್ನು ಪ್ರಕರಣದ ವಾಸ್ತವಿಕ ಸಂಗತಿಗಳು ತೋರಿಸುತ್ತವೆಂದು ನಿವೇದಿಸಿದ್ದಾರೆ.ಇದು ರುಜುವಾತಾಗಿರದಿದ್ದರೂ ಅಪೀಲು ನ್ಯಾಯಾಲಯವು ದೋಷವೆಸಗಿದೆ ಎಂದು ನಿವೇದಿಸಿದ್ದಾರೆ.ನೀಡಲಾದ ಕಾರಣಗಳು ಕಾನೂನಿನ ಅಡಿಯಲ್ಲಿ ಸಮರ್ಥನೀಯವಾಗಿರುವುದಿಲ್ಲ.ಅಧಿವಿಚಾರಣಾ ನ್ಯಾಯಾಲಯವು, ಗಾಯಾಳು ಸಾಕ್ಷಿದಾರನ ಸಾಕ್ಷ್ಯವನ್ನು ಹಾಗೂ ವೈದ್ಯಕೀಯ ಸಾಕ್ಷ್ಯವನ್ನು ಗ್ರಹಿಸಿದ್ದು, ಸದರಿ ನಿರ್ಣಯಕ್ಕೆ ಕಾರಣಗಳನ್ನು ನೀಡುವ ಮೂಲಕ ಆಪಾದಿತನನ್ನು ಅಪರಾಧಿಯೆಂದು ಸರಿಯಾಗಿ ನಿರ್ಣಯಿಸಿದೆ.ಇದನ್ನು, ಅಪೀಲು ನ್ಯಾಯಾಲಯವು ಯುಕ್ತ ಕಾರಣಗಳನ್ನು ನೀಡದೆ ವಿಪರ್ಯಯಗೊಳಿಸಿದೆ.ಹೀಗಾಗಿ, ಅಪೀಲು ನ್ಯಾಯಾಲಯವು ನೀಡಿದ ತೀರ್ಪು ತಳ್ಳಿಹಾಕಬಹುದಾಗಿದ್ದು, ಅಧಿವಿಚಾರಣಾ ನ್ಯಾಯಾಲಯದ ಅಪರಾಧ ನಿರ್ಣಯದ ಆದೇಶವನ್ನು ಪುನಸ್ಥಾಪಿಸಬೇಕಾಗಿದೆಯೆಂದು ನಿವೇದಿಸಿದ್ದಾರೆ.

10. ಮತ್ತೊಂದು ಕಡೆಯಲ್ಲಿ, ಎದುರುದಾರ ಸಂ .1 ಹಾಗೂ 2 ನೇ ಸಂಖ್ಯೆಯ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ತಮ್ಮ ವಾದದಲ್ಲಿ, ಎದುರುದಾರರು ಪ್ರತ್ಯೇಕ ಪ್ರತಿವಾದವನ್ನು ಬಳಸಿರುವರೆಂದು ವಾದಿಸಿದ್ದಾರೆ.ದೂರುದಾರನು, ಎದುರುದಾರರ ಮನೆಗೆ ಮಾರಕಾಸ್ತ್ರಗಳೊಂದಿಗೆ ಹೋಗಿ ಅವರನ್ನು ಬೈದು, ಆಸ್ತಿಯನ್ನು ಪಾಲುಮಾಡಲು ಒತ್ತಾಯಿಸಿದ್ದಾರೆ.ದೂರುದಾರನು, ಭಾಗವನ್ನು ಮಾಡದಿದ್ದರೆ ತಾನು ಕೈಕಾಲುಗಳನ್ನು ಕತ್ತರಿಸುವುದಾಗಿ ಆಪಾದಿತನನ್ನು ಬೆದರಿಸಿದ್ದಾನೆ.2 ನೇ ಆಪಾದಿತನನ್ನು ದೂರುದಾರನು ಕುಡುಗೋಲಿನಿಂದ ಹಲ್ಲೆ ಮಾಡುವಾಗ, ಇತರೆ ಯಾವುದೇ ಪರ್ಯಾಯವಿಲ್ಲದೆ 1 ನೇ ಸಂಖ್ಯೆಯ ಆಪಾದಿತನು ದೂರುದಾರನ ಕೈಗಳನ್ನು ತಳ್ಳಿದ್ದಾನೆ.ಇದರ ಪರಿಣಾಮವಾಗಿ, ಅವನಿಗೆ ಗಾಯಗಳಾಗಿರುವುದನ್ನು ಅಪೀಲು ನ್ಯಾಯಾಲಯದ ಮುಂದೆ ಯುಕ್ತವಾಗಿ ವಿವರಿಸಲಾಗಿದೆ.ಪ್ರತಿವಾದಿ ಸಾಕ್ಷಿದಾರಳ ಸಾಕ್ಷ್ಯವನ್ನು ಅಪೀಲು ನ್ಯಾಯಾಲಯದ ಗಮನಕ್ಕೆ ತರಲಾಗಿದ್ದು, ಅಪೀಲು ನ್ಯಾಯಾಲಯವು ಸರಿಯಾಗಿ ಗ್ರಹಿಸಿದ್ದು, ಅಧಿವಿಚಾರಣಾ ನ್ಯಾಯಾಲಯದ ಅಪರಾಧ ನಿರ್ಣಯ ಹಾಗೂ ಶಿಕ್ಷೆಯು ಕಾನೂನು ಬಾಹಿರವಾಗಿದೆ, ಮನಬಂದಂತೆ ನೀಡಿದೆ ಹಾಗೂ ವಿಚಿತ್ರವಾಗಿದೆಯೆನ್ನುವ ನಿರ್ಣಯಕ್ಕೆ ಬಂದಿದ್ದು, ಸರಿಯಾದ ಆದೇಶವನ್ನು ಹೊರಡಿಸಿದೆಯೆಂದು ವಾದಿಸಿದ್ದಾರೆ.ಹೀಗಾಗಿ, ಅಪೀಲು ನ್ಯಾಯಾಲಯದ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ, ಹೀಗಾಗಿ ಅಪೀಲನ್ನು ವಜಾಗೊಳಿಸಲು ಈ ನ್ಯಾಯಾಲಯವನ್ನು ಕೋರಲಾಗಿದೆ.

11. ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರು ಹಾಗೂ ಎದುರುದಾರರ/ಆಪಾದಿತರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದು, ನಮ್ಮ ಪರಿಗಣನೆಗಾಗಿ ಉದ್ಭವಿಸಿರುವ ಅಂಶಗಳು ಹೀಗಿವೆ:

1. II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಆಪಾದಿತರ ವಿರುದ್ಧ ವಿಧಿಸಲಾದ ಅಪರಾಧಗಳ ಸಂಬಂಧ ಅವರನ್ನು ಖುಲಾಸೆಗೊಳಿಸುವಲ್ಲಿ ದೋಷವೆಸಗಿದ್ದಾರೆಯೇ ಹಾಗೂ ಅಧಿವಿಚಾರಣಾ ನ್ಯಾಯಾಲಯವು ಆದೇಶಿಸಲಾದಂಥ ಅಪರಾಧ ನಿರ್ಣಯ ಹಾಗೂ ಶಿಕ್ಷೆಯ ತೀರ್ಪನ್ನು ಪುನರ್ಸ್ಥಾಪಿಸುವ ಮೂಲಕ ಹಸ್ತಕ್ಷೇಪವನ್ನು ಅಗತ್ಯಪಡಿಸುತ್ತದೆಯೇ?

2. ಆದೇಶ ಏನು?

12. ಎರಡೂ ಕಡೆಯ ವಕೀಲರ ವಾದಗಳನ್ನು ಪ್ರಸ್ತಾವಿಸುವ ಮುನ್ನ, ಈ ನ್ಯಾಯಾಲಯವು, ಪ್ರಾಸಿಕ್ಯೂಷನ್ನ ವಾದವನ್ನು ಅಡಕವಾಗಿ ಸೂಚಿಸಬೇಕು.ಪ್ರಾಸಿಕ್ಯೂಷನ್ನ ವಾದವೇನೆಂದರೆ, ದಿನಾಂಕ 17.02.1999 ರಂದು ಮಧ್ಯಾಹ್ನ ಸುಮಾರು 3.00 ಗಂಟೆಯಲ್ಲಿ ಮಂಗಳೂರು ತಾಲೂಕಿನ ಹೊಸಬೆಟ್ಟು ಗ್ರಾಮದಲ್ಲಿ, 1 ನೇ ಸಂಖ್ಯೆಯ ಆಪಾದಿತನ ಮನೆಯ ಪ್ರಾಂಗಣದಲ್ಲಿ, ಆಪಾದಿತನು ಬಂದಾಗ, 1 ನೇ ಸಂಖ್ಯೆಯ ಆಪಾದಿತನು, ತನ್ನ ಕೈಗಳಿಂದ ದೂರುದಾರನನ್ನು ಹಿಡಿದುಕೊಂಡಿದ್ದಾನೆ ಎಂಬುದಾಗಿದೆ.2 ನೇ ಸಂಖ್ಯೆಯ ಆಪಾದಿತಳು, ದೂರುದಾರನನ್ನು ಕುಡುಗೋಲಿನಿಂದ ಹಲ್ಲೆ ಮಾಡಿದ್ದು, ಆ ಕಾರಣದಿಂದ ಅವನ ಕೈಗಳು ಹಾಗೂ ಕಾಲುಗಳಿಗೆ ಹಾಗೂ ದೇಹದ ಇತರ ಭಾಗಗಳಿಗೆ ಸರಳ ಹಾಗೂ ತೀವ್ರತರನಾದ ಗಾಯಗಳಾಗಿವೆ.ದೂರನ್ನು ಆಧರಿಸಿ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 324 ಹಾಗೂ 326 ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ 1 ಹಾಗೂ 2 ನೇ ಸಂಖ್ಯೆಯ ಆಪಾದಿತರ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ.

13. ಪ್ರಾಸಿಕ್ಯೂಷನ್ ವಾದವನ್ನು ಹಾಗೂ ಆಪಾದಿತನ ಪ್ರತಿವಾದವನ್ನು ಗಮನಕ್ಕೆ ತೆಗೆದುಕೊಂಡಿದ್ದು, ಘಟನೆ ನಡೆದಿರುವ ಕುರಿತು ಯಾವುದೇ ವಿವಾದವಿಲ್ಲ.ಅಧಿವಿಚಾರಣೆ ನಡೆಯುವ ಅವಧಿಯಲ್ಲಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನು ಖಾಸಗಿ ಪ್ರತಿರಕ್ಷೆಯ ವಾದವನ್ನು ತೆಗೆದುಕೊಳ್ಳಲಾಗಿದೆ.ಆದಾಗ್ಯೂ, ಪ್ರಾಸಿಕ್ಯೂಷನ್ನ ಸಾಕ್ಷ್ಯವೇನೆಂದರೆ, ಪ್ರಾ.ಸಾ .1 ಹಾಗೂ 3 ಇವರು, ಕಿರುಚಾಡುವ ಶಬ್ದ ಎಂದರೆ ದೂರುದಾರನ ಪತ್ನಿ ಹಾಗೂ ದೂರುದಾರನ ಹೆಂಡತಿಯ ಸಹೋದರನ ಕಿರುಚಾಟದ ಶಬ್ದ ಕೇಳಿಸಿಕೊಂಡು ಸ್ಥಳಕ್ಕೆ ಹೋದಾಗ ಆಪಾದಿತ ವ್ಯಕ್ತಿಗಳು ದೂರುದಾರನನ್ನು ಥಳಿಸುತ್ತಿದ್ದುದು ಕಂಡುಬಂದಿತು ಎಂಬುದಾಗಿದೆ.ದೂರುದಾರನನ್ನು ಪ್ರಾ.ಸಾ .2 ಎಂದು ವಿಚಾರಣೆ ಮಾಡಲಾಗಿದ್ದು, 1 ನೇ ಸಂಖ್ಯೆಯ ಆಪಾದಿತನು ಅವನ ಮನೆಗೆ ಕರೆದಿದ್ದು, ಅಲ್ಲಿಗೆ ಹೋದಾಗ, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು ಕುಡುಗೋಲಿನಿಂದ ಹಲ್ಲೆ ನಡೆಸಿದರೆಂದು ಹೇಳಿರುತ್ತಾರೆ.ಪ್ರಾಸಿಕ್ಯೂಷನ್ನು ಕೂಡ, ಎಸ್ಟಿಡಿ ಬೂತನ್ನು ನಡೆಸುತ್ತಿರುವ ಪ್ರಾ.ಸಾ .4 ರ ಸಾಕ್ಷ್ಯವನ್ನು ಆಧರಿಸಿದ್ದು, ಅವನು, ಪ್ರತಿವಾದಿ ಸಾಕ್ಷ್ಯ ಎಲಾ 1 ಬೂತ್ಗೆ ಬಂದು ಪೊಲೀಸರಿಗೆ ದೂರವಾಣಿ ಕರೆಯನ್ನು ಮಾಡಿದರೆಂದು ಹಾಗೂ ಅವಳು, ದೂರುದಾರನು ಅವಳ ತಾಯಿಯನ್ನು ಥಳಿಸುತ್ತಿದ್ದಾರೆಂದು ಹೇಳುತ್ತಿದ್ದಳೆಂದು ಹೇಳಿಕೆ ನೀಡಿದ್ದಾನೆ.ಪ್ರಾ.ಸಾ .5, ಕುಡುಗೋಲನ್ನು ಹಾಗೂ ನಿಶಾನೆ ಪಿ .1 ಹಾಗೂ 2 ರ ಪರಿಭಾಷೆಯಲ್ಲಿ ಷರಾಯಿಯನ್ನು ವಶಪಡಿಸಿಕೊಳ್ಳುವ ಸಂಬಂಧದಲ್ಲಿ ಮಹಜರನ್ನು ನಡೆಸಿದ್ದಾರೆ.ಇವರು ಸಾಕ್ಷಿಧಾರರ ಹೇಳಿಕೆಯನ್ನು ದಾಖಲಿಸಿದ್ದು, ಗಾಯ ಪ್ರಮಾಣಪತ್ರವನ್ನು ಸಂಗ್ರಹಿಸಿ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ.ಪ್ರಾ.ಸಾ .7, ಮುಖ್ಯ ಪೇದೆಯಾಗಿದ್ದು, ಇವರು ಪ್ರತಿವಾದಿ ಸಾಕ್ಷ್ಯ ಎ 1 ರಿಂದ ಬಂದ ದೂರವಾಣಿ ಕರೆಯನ್ನು ಸ್ವೀಕರಿಸಿ, ಸ್ಥಳಕ್ಕೆ ಹೋಗಿದ್ದು, ಸ್ಥಳದಲ್ಲಿ ಗಾಯಾಳು ಕಂಡುಬಂದಿದ್ದು, ಆಂಬುಲೆನ್ಸನ್ನು ಪಡೆದುಕೊಂಡು, ಗಾಯಾಳುವನ್ನು ಮೂಡಬಿದಿರೆಯ ಪ್ರಥಮ ಚಿಕಿತ್ಸಾ ಕೇಂದ್ರಕ್ಕೆ ಸ್ಥಳಾಂತರಿಸಿದ್ದಾರೆ.ಪ್ರಾ.ಸಾ .8 ವೈದ್ಯರಾಗಿದ್ದು, ಗಾಯಾಳುವಿಗೆ ವೈದ್ಯಕೀಯ ಪರೀಕ್ಷೆಯನ್ನು ನಡೆಸಿದ್ದಾರೆ ಹಾಗೂ ಸಂತ್ರಸ್ತರ ದೇಹದ ಮೇಲೆ ಆಗಿದ್ದ ಏಳು ಗಾಯಗಳನ್ನು ಗುರುತಿಸಿದ್ದಾರೆ.

14. ಸಾಕ್ಷ್ಯವನ್ನು ಪರಿಗಣಿಸಿದ್ದು, ಪ್ರಾಸಿಕ್ಯೂಷನ್ನ ವಾದಗಳು ಹಾಗೂ ಪ್ರತಿವಾದವನ್ನು ಸಹ ಪರಿಗಣಿಸಿ, ನಾವು, ಘಟನೆ ನಡೆದಿರುವ ಸಂಬಂಧ ಯಾವುದೇ ವಿವಾದವಿಲ್ಲವೆಂಬುದನ್ನು ಈಗಾಗಲೇ ಗುರುತಿಸಿದ್ದೇವೆ.ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಪ್ರಯೋಗಿಸುವ ಸಂಬಂಧದಲ್ಲಿ ಮಾತ್ರ ವಿವಾದವಿದೆ.ಆಪಾದಿತನ ಪ್ರತಿವಾದ ಏನೇಂದರೆ, ತಮಗೆ ಜೀವಬೆದರಿಕೆ ಇತ್ತೆಂದು ಹೀಗಾಗಿ, ಖಾಸಗಿ ಪ್ರತಿರಕ್ಷೆಯ ತಮ್ಮ ಹಕ್ಕನ್ನು ಚಲಾಯಿಸಿದೆ ಎಂಬುದಾಗಿದೆ.ಅಪೀಲಿನ ಆಧಾರಗಳನ್ನು ಹಾಗೂ ಪ್ರತಿರಕ್ಷೆಯ ವಾದವನ್ನು ಪರಿಗಣಿಸುವ ಸಲುವಾಗಿ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ವಿಶ್ಲೇಷಿಸುವ ಮೊದಲು, ಪ್ರತ್ಯೇಕ ಪ್ರತಿವಾದಕ್ಕೆ ಸಂಬಂಧಪಟ್ಟಂತೆ ಭಾರತ ದಂಡ ಸಂಹಿತೆಯ 96 ರಿಂದ 102 ಪ್ರಕರಣಗಳನ್ನು ಪರಾಮರ್ಶಿಸಬಹುದಾಗಿದೆ.ಯಾವ ಸನ್ನಿವೇಶಗಳ ಅಡಿಯಲ್ಲಿ ಪ್ರತ್ಯೇಕ ಪ್ರತಿವಾದವನ್ನು ಚಲಾಯಿಸಬಹುದಾಗಿದೆ ಹಾಗೂ ಖಾಸಗಿ ಪ್ರತಿರಕ್ಷೆಯ ಹಕ್ಕು ಯಾವ ತರದ ವ್ಯಕ್ತಿಗಳ ಸಹಾಯಕ್ಕೆ ಬರುತ್ತದೆ.ಈ ಮುಂದೆ ಖಾಸಗಿ ಪ್ರತಿರಕ್ಷೆಯ ಹಕ್ಕಿಗೆ ಸಂಬಂಧಿಸಿದ ಭಾರತ ದಂಡ ಸಂಹಿತೆಯ 96 ರಿಂದ 102 ನೇ ಪ್ರಕರಣಗಳನ್ನು ಈ ಮುಂದೆ ಉದ್ಧೃತಗೊಳಿಸಲಾಗಿದೆ:

96. ಖಾಸಗಿ ಪ್ರತಿರಕ್ಷೆಗಾಗಿ ಮಾಡಿದ ಕೃತ್ಯಗಳು.

ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಪ್ರಯೋಗಿಸಿ ಮಾಡಿದ ಯಾವುದೇ ಕೃತ್ಯವು ಅಪರಾಧವಾಗುವುದಿಲ್ಲ.

97. ದೇಹ ಮತ್ತು ಸ್ವತ್ತಿನ ಬಗ್ಗೆ ಖಾಸಗಿ ಪ್ರತಿರಕ್ಷೆಯ ಅಧಿಕಾರ.

99 ನೇ ಪ್ರಕರಣದಲ್ಲಿರುವ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಕ್ತಿಗೂ,

ಮೊದಲನೆಯದಾಗಿ, ತನ್ನ ದೇಹವನ್ನು ಅಥವಾ ಇತರ ಯಾರೇ ವ್ಯಕ್ತಿಯ ದೇಹವನ್ನು ಮಾನವ ದೇಹಕ್ಕೆ ಬಾಧಕವಾಗುವ ಯಾವುದೇ ಅಪರಾಧ ಆಗದಂತೆ;

ಎರಡನೆಯದಾಗಿ, ತನ್ನ ಅಥವಾ ಇತರ ಯಾರೇ ವ್ಯಕ್ತಿಯ ಚರ ಸ್ವತ್ತನ್ನು ಅಥವಾ ಸ್ಥಿರ ಸ್ವತ್ತನ್ನು ಕಳ್ಳತನ, ಸುಲಿಗೆ, ಕೇಡು ಅಥವಾ ಕ್ರಿಮಿನಲ್ ಅತಿಕ್ರಮಣದ ಪರಿಭಾಷೆಗೆ ಒಳಪಡುವ ಅಪರಾಧವಾಗುವಂತಹ ಅಥವಾ ಯಾವ ಕೃತ್ಯವು ಕಳವು ಮಾಡಲು, ಸುಲಿಗೆ ಮಾಡಲು, ಕೇಡುಂಟು ಮಾಡಲು ಅಥವಾ ಕ್ರಿಮಿನಲ್ ಅತಿಕ್ರಮಣ ಎಸಗಲು ಮಾಡಿದ ಪ್ರಯತ್ನವೆನಿಸುತ್ತದೋ ಆ ಆ ಯಾವುದೇ ಕೃತ್ಯ;

98. ಅಸ್ವಸ್ಥ ಮನಸ್ಸಿನ ವ್ಯಕ್ತಿ ಮುಂತಾದವರಿಂದ ಕೃತ್ಯ ನಡೆಯದಂತೆ ಖಾಸಗಿ ಪ್ರತಿರಕ್ಷೆಗೆ ಅಧಿಕಾರ

ಯಾವ ಕೃತ್ಯವು ಅನ್ಯಥಾ ಒಂದು ನಿರ್ದಿಷ್ಟ ಅಪರಾಧವಾಗುತ್ತದೋ ಆ ಕೃತ್ಯವು, ಆ ಕೃತ್ಯವನ್ನು ಮಾಡುವ ವ್ಯಕ್ತಿಯ ಹುಡುಗುತನ, ಪರಿಪಕ್ವ ಅರಿವಿನ ಅಭಾವ, ಅಸ್ವಸ್ಥ ಮನಸ್ಸು ಅಥವಾ ಅಮಲಿನ ಕಾರಣದಿಂದ ಅಥವಾ ಆ ವ್ಯಕ್ತಿಯ ತಪ್ಪು ಭಾವನೆಯ ಕಾರಣದಿಂದ ಅದು ಅಪರಾಧವಾಗದಿದ್ದರೆ, ಆ ಕೃತ್ಯವು ಆ ಅಪರಾಧವಾಗಿದ್ದಿದ್ದರೆ ಹೇಗೆ ಆ ಕೃತ್ಯದ ವಿರುದ್ಧ ಪ್ರತಿಯೊಬ್ಬ ವ್ಯಕ್ತಿಗೂ ಖಾಸಗಿ ಪ್ರತಿರಕ್ಷೆಯ ಅಧಿಕಾರವಿರುತ್ತಿತ್ತೋ ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಗೂ ಅದೇ ಖಾಸಗಿ ಪ್ರತಿರಕ್ಷೆಯ ಅಧಿಕಾರವಿರುತ್ತದೆ.

99. ಯಾವ ಕೃತ್ಯಗಳ ಬಗ್ಗೆ ಖಾಸಗಿ ಪ್ರತಿರಕ್ಷೆಯ ಅಧಿಕಾರವಿಲ್ಲವೋ ಆ ಕೃತ್ಯಗಳು.

ತನ್ನ ಅಧಿಕಾರ ಸ್ಥಾನದ ನಿಮಿತ್ತ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಲೋಕ ನೌಕರನು ಮಾಡಿದ ಯಾವುದೇ ಕೃತ್ಯವು ಅದು ಕಾನೂನಿನಿಂದ ಕಟ್ಟುನಿಟ್ಟಾಗಿ ಸಮರ್ಥನೀಯ ವಲ್ಲದಿದ್ದರೂ, ಮರಣದ ಅಥವಾ ತೀವ್ರ ಗಾಯದ ಭಯವನ್ನು ಸಕಾರಣವಾಗಿ ಉಂಟುಮಾಡದಿದ್ದರೆ ಆ ಕೃತ್ಯದ ಬಗ್ಗೆ ಖಾಸಗಿ ಪ್ರತಿರಕ್ಷೆಗೆ ಯಾವುದೇ ಅಧಿಕಾರವಿರುವುದಿಲ್ಲ.

ತನ್ನ ಅಧಿಕಾರ ಪದದ ನಿಮಿತ್ತ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಲೋಕ ನೌಕರನ ನಿರ್ದೇಶನದಿಂದ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕೃತ್ಯವು ಆ ನಿರ್ದೇಶನವು ಕಾನೂನಿನಿಂದ ಕಟ್ಟುನಿಟ್ಟಾಗಿ ಸಮರ್ಥನೀಯ ವಲ್ಲದಿದ್ದರೂ, ಆ ಕೃತ್ಯವು ಮರಣದ ಅಥವಾ ತೀವ್ರ ಗಾಯದ ಭಯವನ್ನು ಸಕಾರಣವಾಗಿ ಉಂಟುಮಾಡದಿದ್ದರೆ, ಆ ಕೃತ್ಯದ ಬಗ್ಗೆ ಖಾಸಗಿ ಪ್ರತಿರಕ್ಷೆಗೆ ಯಾವುದೇ ಅಧಿಕಾರವಿರುವುದಿಲ್ಲ.

ಲೋಕ ಪ್ರಾಧಿಕಾರಿಗಳಿಂದ ಸಂರಕ್ಷಣೆಗೆ ಮೊರೆ ಹೋಗಲು ಸಮಯವಿರುವ ಸಂದರ್ಭಗಳಲ್ಲಿ ಖಾಸಗಿ ಪ್ರತಿರಕ್ಷೆಗೆ ಅಧಿಕಾರವಿರುವುದಿಲ್ಲ.

ಎಷ್ಟರಮಟ್ಟಿಗೆ ಈ ಅಧಿಕಾರವನ್ನು ಚಲಾಯಿಸಬಹುದು.ಪ್ರತಿರಕ್ಷೆಯ ಉದ್ದೇಶಕ್ಕಾಗಿ ಅವಶ್ಯವಿರುವುದಕ್ಕಿಂತಲೂ ಹೆಚ್ಚು ಚ ಹಾನಿಯನ್ನು ಉಂಟುಮಾಡುವುದಕ್ಕೆ ಖಾಸಗಿ ಪ್ರತಿರಕ್ಷೆಯ ಅಧಿಕಾರವು ಯಾವ ಸಂದರ್ಭದಲ್ಲೂ ವ್ಯಾಪಿಸುವುದಿಲ್ಲ.

100. ಮರಣವನ್ನು ಉಂಟುಮಾಡುವುದಕ್ಕೆ ತೊಡಗಿದಾಗ ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಅಧಿಕಾರವು ಯಾವಾಗ ವ್ಯಾಪಿಸುತ್ತದೆ.

ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಅಧಿ ಕಾರವು ಈ ಹಿಂದಿನ ಪ್ರಕರಣದಲ್ಲಿ ನಮೂದಿಸಿದ ನಿರ್ಬಂಧಗಳಿಗೆ ಒಳಪಟ್ಟು, ಯಾವ ಅಪರಾಧವು ಆ ಅಧಿಕಾರವನ್ನು ಚಲಾಯಿಸುವಂತೆ ಮಾಡುವಂತಹ ಈ ಮುಂದೆ ವರ್ಣಿಸಿರುವ ಅಪರಾಧಗಳಲ್ಲಿ ಯಾವುದಾದರೂ ಆಗಿದ್ದರೆ ಹಲ್ಲೆ ಕಾರನಿಗೆ ಮರಣವನ್ನು ಅಥವಾ ಇತರ ಯಾವುದೇ ಹಾನಿಯನ್ನು ಸ್ವಯಿಚ್ಛೆಯಿಂದ ಉಂಟುಮಾಡುವುದಕ್ಕೆ ತೊಡಗಿದಾಗ ವ್ಯಾಪಿಸುತ್ತದೆ; ಆ ಅಪರಾಧಗಳು ಯಾವುವೆಂದರೆ:

ಮೊದಲನೆಯದಾಗಿ.-ಯಾವ ಹಲ್ಲೆಯ ಪರಿಣಾಮವಾಗಿ ಮರಣದ ಹೊರತು ಬೇರೇನೂ ಉಂಟಾಗದೆ ೦ ದು ಸಮಂಜಸವಾಗಿ ಗ್ರಹಿಸಬಹುದೋ ಅಂತಹ ಹಲ್ಲೆ;

ಎರಡನೆಯದಾಗಿ-ಯಾವ ಹಲ್ಲೆಯ ಪರಿಣಾಮವಾಗಿ, ತೀವ್ರ ಗಾಯದ ಹೊರತು ಬೇರೇನೂ ಉಂಟಾಗದೆಂದು ಸಮ ೦ ಜಸವಾಗಿ ಗ್ರಹಿಸಬಹುದೋ ಅಂತಹ ಹಲ್ಲೆ;

ಮೂರನೆಯದಾಗಿ.-ಬಲತ್ಕಾರ ಸಂಭೋಗದ ಉದ್ದೇಶವುಳ್ಳ ಹಲ್ಲೆ;

ನಾಲ್ಕನೆಯದಾಗಿ-ಪ್ರಕೃತಿ ವಿರುದ್ಧವಾದ ಕಾಮ ತೃಪ್ತಿಯ ಉದ್ದೇಶವುಳ್ಳ ಹಲ್ಲೆ;

ಐದನೆಯದಾಗಿ ಕದ್ದೊಯ್ಯುವ ಅಥವಾ ಅಪಹರಣದ ಉದ್ದೇಶವುಳ್ಳ ಹಲ್ಲೆ;

ಆರನೆಯದಾಗಿ ತನ್ನ ಬಿಡುಗಡೆಗಾಗಿ ಸಾರ್ವಜನಿಕ ಪ್ರಾಧಿಕಾರಗಳ ಮೊರೆ ಹೋಗಲು ತನಗೆ ಸಾಧ್ಯವಾಗುವುದಿಲ್ಲವೆಂದು ಯಾವ ಸನ್ನಿವೇಶಗಳಲ್ಲಿ ಸಮಂಜಸವಾಗಿ ಗ್ರಹಿಸಬಹುದೋ ಆ ಸನ್ನಿವೇಶಗಳಲ್ಲಿ ವ್ಯಕ್ತಿಯನ್ನು ಅಕ್ರಮ ಬಂಧನದಲ್ಲಿ ಇಡುವ ಉದ್ದೇಶದಿಂದ ಮಾಡಿದ ಹಲ್ಲೆ;

ಏಳನೆಯದಾಗಿ-ಆಸಿಡನ್ನು ಎರಚುವ ಅಥವಾ ಕುಡಿಸುವ ಅಥವಾ ಎರಚಲು ಅಥವಾ ಕುಡಿಸಲು ಪ್ರಯತ್ನಿಸುವ ಯಾವ ಕೃತ್ಯದ ಪರಿಣಾಮವಾಗಿ ತೀವ್ರ ಸ್ವರೂಪದ ನೋವು ಉಂಟಾಗಬಹುದೆಂದು ಸಮಂಜಸವಾಗಿ ಭಾವಿಸಬಹುದಾಗಿದೆಯೋ ಆ ಕೃತ್ಯ.

101. ಮರಣದ ಹೊರತು ಇತರ ಯಾವುದೇ ಹಾನಿಯನ್ನು ಉಂಟುಮಾಡುವುದಕ್ಕೆ ತೊಡಗಿದಾಗ ಅಂಥ ಅಧಿಕಾರವು ಯಾವಾಗ ವ್ಯಾಪಿಸುತ್ತದೆ.

ಅಪರಾಧವು, ಈ ಹಿಂದಿನ ಪ್ರಕರಣದಲ್ಲಿ ವರ್ಣಿಸಿದ ಯಾವುದೇ ಅಪರಾಧವಾಗಿರದಿದ್ದರೆ, ದೇಹದ ರಕ್ಷಣೆಗಾಗಿ ಇರುವ ಖಾಸಗಿ ಪ್ರತಿರಕ್ಷೆಯ ಅಧಿಕಾರವು ಸ್ವಯಿಚ್ಛೆಯಿಂದ ಹಲ್ಲೆ ಕಾರನಿಗೆ ಮರಣವನ್ನು ಉಂಟು ಮಾಡುವವರೆಗೆ ವ್ಯಾಪಿಸುವುದಿಲ್ಲ; ಆದರೆ 99 ನೇ ಪ್ರಕರಣದಲ್ಲಿ ನಮೂದಿಸಲಾದ ನಿರ್ಬಂಧಗಳಿಗೆ ಒಳಪಟ್ಟು, ಹಲ್ಲೆ ಕಾರನಿಗೆ ಮರಣದ ಹೊರತು ಇತರ ಹಾನಿಯನ್ನು ಉಂಟುಮಾಡುವವರೆಗೂ ವ್ಯಾಪಿಸುತ್ತದೆ.

102. ದೇಹದ ಖಾಸಗಿ ರಕ್ಷಣೆಗಾಗಿ ಇರುವ ಪ್ರತಿರಕ್ಷೆಯ ಅಧಿಕಾರದ ಪ್ರಾರಂಭ ಮತ್ತು ಮುಂದುವರಿಕೆ.

ಅಪರಾಧವನ್ನು ಮಾಡಿರದಿದ್ದರೂ, ಅದನ್ನು ಮಾಡುವ ಪ್ರಯತ್ನದಿ ೦ ದ ಅಥವಾ ಬೆದರಿಕೆಯಿ ೦ ದ ದೇಹಕ್ಕೆ ಅಪಾಯವುಂಟಾಗುವ ಸಮಂಜಸ ಭಯವು ಉದ್ಭವಿಸಿದೊಡನೆಯೆ ದೇಹದ ಖಾಸಗಿ ರಕ್ಷಣೆಗಾಗಿ ಇರುವ ಪ್ರತಿರಕ್ಷೆಯ ಅಧಿಕಾರವು ಪ್ರಾರಂಭವಾಗುತ್ತದೆ ಮತ್ತು ದೇಹಕ್ಕೆ ಅಂಥ ಅಪಾಯದ ಭಯವು ಮು 0 ದುವರಿಯುವವರೆಗೆ ಅದೂ ಮುಂದುವರಿಯುತ್ತದೆ.

15. ಭಾರತ ದಂಡ ಸಂಹಿತೆಯ 96 ರಿಂದ 102 ನೇ ಪ್ರಕರಣಗಳ ಉಪಬಂಧಗಳನ್ನು ಎಚ್ಚರಿಕೆಯಿಂದ ಅವಗಾಹಿಸಿದ ಮೇಲೆ ವ್ಯಕ್ತಿಗೆ ಲಭ್ಯವಿರುವ ಖಾಸಗಿ ಪ್ರತಿರಕ್ಷೆ ಹಕ್ಕಿಗೆ ಸಂಬಂಧಿಸಿದಂತೆ, ದೇಹಕ್ಕೆ ಹಾಗೂ ಸ್ವತ್ತಿಗೆ ಅಪಾಯವಿರುವಾಗ 96 ನೇ ಪ್ರಕರಣದ ಸಂಬಂಧಪಟ್ಟ ಪರಂತುಕವು, ಖಾಸಗಿ ಪ್ರತಿರಕ್ಷೆಯಲ್ಲಿ ಏನಾದರೂ ಮಾಡಿದರೆ, ಅದು ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಚಲಾಯಿಸುವಲ್ಲಿ ಅಪರಾಧವನ್ನೇನೂ ಮಾಡಿದಂತಾಗುವುದಿಲ್ಲ ಎಂಬುದನ್ನು ತಿಳಿಸುತ್ತದೆ.99 ನೇ ಪ್ರಕರಣದಲ್ಲಿರುವ ನಿರ್ಬಂಧಗಳಿಗೊಳಪಟ್ಟು, ಪ್ರತಿಯೊಬ್ಬ ವ್ಯಕ್ತಿಗೂ, ತನ್ನ ದೇಹವನ್ನು ಅಥವಾ ಇತರ ಯಾರೇ ವ್ಯಕ್ತಿಯ ದೇಹವನ್ನು ಮಾನವ ದೇಹಕ್ಕೆ ಬಾಧಕವಾಗುವ ಯಾವುದೇ ಅಪರಾಧದ ವಿರುದ್ಧ ಪ್ರತಿರಕ್ಷಿಸಿಕೊಳ್ಳಲು ಅಧಿಕಾರವಿರುತ್ತದೆಂಬುದನ್ನು 97 ನೇ ಪ್ರಕರಣವು ತಿಳಿಸುತ್ತದೆ.ಎರಡನೇ ಅಂಶವು, ಸಂಬಂಧಪಟ್ಟ ಸ್ವತ್ತಿನ ಸಂಬಂಧದಲ್ಲಿ ಅಗತ್ಯವಿರುವುದಿಲ್ಲ.99 ನೇ ಪ್ರಕರಣವು, ತನ್ನ ಅಧಿಕಾರ ಪದದ ನಿಮಿತ್ತ ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಲೋಕನೌಕರನು ಮಾಡಿದ ಯಾವುದೇ ಕೃತ್ಯವು ವಿಧಿಯಿಂದ ಕಟ್ಟುನಿಟ್ಟಾಗಿ ಸಮರ್ಥನೀಯವಲ್ಲದಿದ್ದರೂ, ಮರಣದ ಅಥವಾ ತೀವ್ರ ಗಾಯದ ಭಯವನ್ನು ಸಕಾರಣವಾಗಿ ಉಂಟುಮಾಡಿಲ್ಲದಿದ್ದರೆ ಅಥವಾ ಉಂಟುಮಾಡಲು ಪ್ರಯತ್ನಿಸಿಲ್ಲದಿದ್ದರೆ, ಕೃತ್ಯದ ವಿರುದ್ಧ ಖಾಸಗಿ ಪ್ರತಿರಕ್ಷೆಯ ಯಾವುದೇ ಅಧಿಕಾರವಿರುವುದಿಲ್ಲ ಎಂಬುದನ್ನು ತಿಳಿಸುತ್ತದೆ.ಅಷ್ಟೇ ಅಲ್ಲದೆ, ಲೋಕ ಪ್ರಾಧಿಕಾರಿಗಳ ಸಂರಕ್ಷಣೆಯ ಮೊರೆಹೋಗಲು ಸಮಯವಿರುವ ಸಂದರ್ಭಗಳಲ್ಲಿ ಖಾಸಗಿ ಪ್ರತಿರಕ್ಷೆಯ ಅಧಿಕಾರವಿರುವುದಿಲ್ಲ.

16. ಖಾಸಗಿ ಪ್ರತಿರಕ್ಷೆಯ ಹಕ್ಕನ್ನು, ಯಾವುದೇ ಸಂದರ್ಭದಲ್ಲಿ ಪ್ರತಿರಕ್ಷೆಯ ಉದ್ದೇಶಕ್ಕಾಗಿ ನೋವುಂಟುಮಾಡುವ ಅಗತ್ಯಕ್ಕಿಂತ ಹೆಚ್ಚಿನ ಹಾನಿಯುಂಟುಮಾಡಲು ಬಳಸಲಾಗುವುದಿಲ್ಲವೆಂಬುದು ಹಾಗೂ ಖಾಸಗಿ ಪ್ರತಿರಕ್ಷೆಯ ಹಕ್ಕನ್ನು ಪ್ರಯೋಗಿಸಲು ನಿರ್ಬಂಧಗಳಿವೆಯೆಂಬುದು ಸ್ಪಷ್ಟವಾಗುತ್ತದೆ.100 ನೇ ಪ್ರಕರಣವನ್ನು ಓದಿದ ನಂತರ, ದೇಹದ ಖಾಸಗಿ ಪ್ರತಿರಕ್ಷೆಯ ಅಧಿಕಾರವ, 99 ನೇ ಪ್ರಕರಣದಲ್ಲಿ ಸೂಚಿಸಲಾದ ನಿರ್ಬಂಧಗಳಿಗೆ ಒಳಪಟ್ಟು, ವಿವರಣೆಗಳಲ್ಲಿರುವ ಯಾವುದೇ ಅಧಿಕಾರವನ್ನು ಪ್ರಯೋಗಿಸುವಂತೆ ಮಾಡುವ ಅಪರಾಧವಾಗಿದ್ದರೆ, ಹಲ್ಲೆಕಾರನಿಗೆ ಮರಣವನ್ನು ಅಥವಾ ಇತರ ಯಾವುದೇ ಹಾನಿಯನ್ನು ಸ್ವಯಿಚ್ಛೆಯಿಂದ ಉಂಟುಮಾಡುವವರೆಗೂ ವ್ಯಾಪಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ.100 ನೇ ಪ್ರಕರಣದಲ್ಲಿ ಒಟ್ಟು ನಾಲ್ಕು ದೃಷ್ಟಾಂತಗಳನ್ನು ಸೂಚಿಸಲಾಗಿದೆ, ಯಾವುವೆಂದರೆ, ( 1) ಅಂಥ ಹಲ್ಲೆಯನ್ನು ಮಾಡದಿದ್ದರೆ ಮರಣವನ್ನು ಉಂಟುಮಾಡಬಹುದೆಂಬ ಸಕಾರಣವನ್ನು ಉಂಟುಮಾಡುವಂಥ ಹಲ್ಲೆ;(ii) ಅಂಥ ಹಲ್ಲೆಯನ್ನು ಮಾಡದಿದ್ದರೆ, ತೀವ್ರಗಾಯವನ್ನು ಉಂಟುಮಾಡಬಹುದೆಂಬ ಸಕಾರಣ ಭಯವನ್ನು ಉಂಟುಮಾಡುವಂಥ ಹಲ್ಲೆ ಹಾಗೂ 3 ರಿಂದ 7 ರವರೆಗಿನ ದೃಷ್ಟಾಂಥಗಳನ್ನು ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳ ಸಂಬಂಧದಲ್ಲಿ ವರ್ಣಿಸುವ ಅಗತ್ಯವಿರುವುದಿಲ್ಲ.

17. ನಮ್ಮ ಮುಂದಿರುವ ಪ್ರಕರಣವು, ಮರಣವಲ್ಲದ ಗಾಯವನ್ನುಂಟು ಮಾಡುವುದಕ್ಕೆ ಸಂಬಂಧಪಡುತ್ತದೆ.102 ನೇ ಪ್ರಕರಣವನ್ನು ಓದಿದ ಮೇಲೆ, ಅಪರಾಧವನ್ನು ಮಾಡಿರದಿದ್ದರೂ ಅದನ್ನು

ಮಾಡುವ ಪ್ರಯತ್ನದಿಂದ ಅಥವಾ ಬೆದರಿಕೆಯಿಂದ ದೇಹಕ್ಕೆ ಅಪಾಯವುಂಟಾಗುವ ಸಕಾರಣ ಭಯವು ಉದ್ಭವಿಸಿದೊಡನೆಯೇ ದೇಹದ ಖಾಸಗಿ ಪ್ರತಿರಕ್ಷೆಯ ಅಧಿಕಾರವು ಪ್ರಾರಂಭವಾಗುತ್ತದೆ; ಮತ್ತು ದೇಹಕ್ಕೆ ಅಂಥ ಅಪಾಯದ ಭಯವು ಮುಂದುವರೆಯುವವರೆಗೆ ಅದೂ ಮುಂದುವರಿಯುವುದು ಎಂಬುದು ಸ್ಪಷ್ಟವಾಗುತ್ತದೆ.

18. ದರ್ಶನ್ ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ ' ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಾವು ಉಲ್ಲೇಖಿಸಲು ಬಯಸುತ್ತೇವೆ.ಈ ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು, ಖಾಸಗಿ-ಪ್ರತಿರಕ್ಷೆಯ ಉದ್ದೇಶದ ತತ್ವಗಳನ್ನು ಆಯ್ದು ನೀಡಲಾಗಿದೆ.

"58. ಮುಂದಿನ ತೀರ್ಪುಗಳನ್ನು ಪರಿಶೀಲಿಸಿದ ಮೇಲೆ ಮುಂದಿನ ತತ್ವಗಳು ತಿಳಿದುಬರುತ್ತದೆ:

(i) ಖಾಸಗಿ-ಸಂರಕ್ಷಣೆಯ ಮಾನವನ ಮೂಲ ಪ್ರವೃತ್ತಿಯಾಗಿದೆ ಹಾಗೂ ಎಲ್ಲಾ ನಾಗರೀಕ ದೇಶಗಳ ಕ್ರಿಮಿನಲ್ ನ್ಯಾಯತತ್ವವು ಯುಕ್ತವಾಗಿ ಪರಿಗಣಿಸಿವೆ.ಎಲ್ಲಾ ಸ್ವತಂತ್ರ, ಪ್ರಜಾಪ್ರಭುತ್ವ ಹಾಗೂ ನಾಗರಿಕ ದೇಶಗಳು ಕೆಲವು ಯುಕ್ತ ಮಿತಿಯೊಳಗೆ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಗುರುತಿಸಿವೆ.

(ii) ಖಾಸಗಿ ಪ್ರತಿರಕ್ಷೆಯ ಅಧಿಕಾರವು ಹಠಾತ್ತನೆ ಎರಗುವವರಿಗೆ ಮಾತ್ರ ಲಭ್ಯವಿದ್ದು, ಸನ್ನಿಹಿತವಾಗುತ್ತಿರುವ ಅಪಾಯವನ್ನು ತಪ್ಪಿಸುವ ಅಗತ್ಯವಾಗಿದೆಯೇ ಹೊರತು ಅದು ಸ್ವಯಂ ಸೃಷ್ಟಿಯಲ್ಲ.

(iii) ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು ಕೇವಲ ಒಂದು ಯುಕ್ತ ಭಯ ಸಾಕಾಗುತ್ತದೆ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಎತ್ತುವ ಸಲುವಾಗಿ ವಾಸ್ತವಿಕ ಅಪರಾಧ ನಡೆದಿದೆಯೆನ್ನುವ ಅಗತ್ಯವಿಲ್ಲ.ಅ ೦ ತಹ ಅಪರಾಧವನ್ನು ಆಪಾದಿತನು ಮಾಡ ಆಲೋಚಿಸಿರುವನೆಂಬ ಭಯವಿದ್ದರೆ ಹಾಗೂ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸದಿದ್ದರೆ ಅಂಥ ಅಪರಾಧ ನಡೆಯುವ ಸಂಭವವಿದೆಯೆಂಬ ಭಯ ಸಾಕಾಗುತ್ತದೆ.

(iv) ಖಾಸಗಿ ಪ್ರತಿರಕ್ಷೆಯ ಅಧಿಕಾರವು, ಸಕಾರಣ ಭಯವು ಉದ್ಭವಿಸಿದೊಡನೆಯೇ ಪ್ರಾರಂಭವಾಗುತ್ತದೆ ಹಾಗೂ ಅಂಥ ಭಯದ ಅವಧಿಯೊಂದಿಗೆ ಇದು ಸಮವ್ಯಾಪಕವಾಗುತ್ತದೆ.

( V) ಹಲ್ಲೆಗೊಳಗಾಗಿರುವ ವ್ಯಕ್ತಿಯು, ಯಾವುದೇ ಲೆಕ್ಕಾಚಾರದ ನಿಷ್ಕೃಷ್ಟತೆ ಕ್ರಮ ತೆಗೆದುಕೊಳ್ಳುವ ಮೂಲಕ ತನ್ನ ಪ್ರತಿರಕ್ಷೆಯನ್ನು ನಿಯಂತ್ರಿಸಿಕೊಳ್ಳಬೇಕು ಎಂದು ನಿರೀಕ್ಷಿಸುವುದು ಅವಾಸ್ತವಿಕ.

(vi) ಖಾಸಾಗಿ ಪ್ರತಿರಕ್ಷಣೆಯಲ್ಲಿ, ಆಪಾದಿತನು ಬಳಸಿದ ಸಾಮರ್ಥ್ಯವು ಸಂಪೂರ್ಣವಾಗಿ ಅಳತೆ ತಪ್ಪಿದುದಾಗಿರಲೇ ಇಲ್ಲ ಅಥವಾ ವ್ಯಕ್ತಿಯು ಅಥವಾ ಆಸ್ತಿಯ ಸಂರಕ್ಷಣೆಗೆ ಅಗತ್ಯವಾಗಿರುವುದ ಕ್ಕಿಂತ ತುಂಬಾ ಹೆಚ್ಚಾಗಿರಲಿಲ್ಲ.

(vii) ಆಪಾದಿತನು, ಖಾಸಗಿ-ಪ್ರತಿರಕ್ಷೆಯ ವಾದ ಮಾಡದಿದ್ದರೂ ಕೂಡ, ದಾಖಲೆಯಲ್ಲಿರುವ ಸಾಕ್ಷ್ಯದಿಂದ ಅದು ಉದ್ಭವವಾಗಿದ್ದರೆ ಅಂಥ ವಾದವು ಪರಿಗಣನೆಗೆ ಮುಕ್ತವಾಗಿರುತ್ತದೆಂಬುದು ಸುಸ್ಥಾಪಿತವಾದುದಾಗಿದೆ.

(viii) ಆಪಾದಿತನು, ಯುಕ್ತ ಸಂದೇಹವನ್ನು ಮೀರಿದ ಖಾಸಗಿ ಪ್ರತಿರಕ್ಷೆಯ ಅಧಿಕಾರದ ಅಸ್ತಿತ್ವವನ್ನು ರುಜುವಾತುಪಡಿಸುವ ಅಗತ್ಯವಿರುವುದಿಲ್ಲ.

(ix) ದಂಡ ಸಂಹಿತೆಯು, ಕಾನೂನು ವಿರೋಧಿಯಾದ ಅಥವಾ ದೋಷಯುಕ್ತವಾದ ಕೃತ್ಯವು ನಡೆದಿರುವಾಗ ಮಾತ್ರ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಪ್ರದಮಾಡಿದೆ.

( x) ತನ್ನ ಜೀವವನ್ನು ಅಥವಾ ಯಾವುದೇ ಅಂಗವನ್ನು ಕಳೆದುಕೊಳ್ಳುವ ಸನ್ನಿಹಿತ ಹಾಗೂ ಸಕಾರಣ ಅಪಾಯ ಹೊಂದಿರುವ ಒಬ್ಬ ವ್ಯಕ್ತಿಯು ಹಲ್ಲೆ ನಡೆಯುವಾಗ ಆಗಲಿ ಅಥವಾ ನೇರವಾಗಿ ಬೆದರಿಕೆ ಹಾಕಿರುವಾಗಲಾಗಲಿ ತನ್ನ ಮೇಲೆ ಹಲ್ಲೆ ಕಾರನು ಸಾಯುವವರೆಗೆ ವಿಸ್ತರಿಸಿದರೂ ಖಾಸಗಿ ಪ್ರತಿರಕ್ಷೆಯನ್ನು ಚಲಾಯಿಸುವಲ್ಲಿ ಯಾವುದೇ ಹಾನಿಯನ್ನು ಉಂಟು ಮಾಡಬಹುದು.

19. ರಿಪ್ಲಾನ್ ಹಾಗೂ ಮತ್ತೊಬ್ಬರು ವಿರುದ್ಧ ಛತ್ತೀಸ್ಗಢ್ ರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಲು ನಾವು ಬಯಸುತ್ತೇವೆ.ಸರ್ವೋಚ್ಚ ನ್ಯಾಯಾಲಯವು ಈ ತೀರ್ಪಿನಲ್ಲಿ, ಖಾಸಗಿ ಪ್ರತಿರಕ್ಷೆಯ ವಾದಕ್ಕೆ ಸಂಬಂಧಿಸಿದಂಥ 97, 99 ಹಾಗೂ 100 ನೇ ಪ್ರಕರಣಗಳನ್ನು ಚರ್ಚಿಸಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ;

66 " ರುಜುವಾತಿನ ಹೊಣೆಗಾರಿಕೆಯು, ಖಾಸಗಿ ಪ್ರತಿರಕ್ಷೆಯ ವಾದವನ್ನು ಮಾಡುವ ಆಪಾದಿತನದಾಗಿದ್ದು, ರುಜುವಾತು ಮಾಡದಿರುವಲ್ಲಿ, ಖಾಸಗಿ ಪ್ರತಿರಕ್ಷೆಯ ವಾದದ ಸತ್ಯವನ್ನು ಅರಿಯುವುದು ನ್ಯಾಯಾಲಯಕ್ಕೆ ಸಾಧ್ಯವಾಗಿರುವುದಿಲ್ಲ.ನ್ಯಾಯಾಲಯವು ಅಂಥ ಸನ್ನಿವೇಶ ಇಲ್ಲದಿರುವುದನ್ನು ಅರಿಯುತ್ತದೆ.ಆಪಾದಿತನು, ಸಕಾರಾತ್ಮಕ ಸಾಕ್ಷ್ಯವನ್ನು ತಾನೇ ಒದಗಿಸುವ ಮೂಲಕವಾಗಲಿ ಅಥವಾ ಪ್ರಾಸಿಕ್ಯೂಷನ್ನು ವಿಚಾರಣೆ ಮಾಡಿದ ಸಾಕ್ಷಿದಾರರಿಂದ ಅಗತ್ಯ ಸಂಗತಿಗಳನ್ನು ಹೊರತೆಗೆಯುವ ಮೂಲಕವಾಗಲಿ ದಾಖಲೆಯಲ್ಲಿರುವ ಅಗತ್ಯ ಸಾಕ್ಷ್ಯಾಧಾರವನ್ನು ಮಂಡಿಸುವುದು ಆಪಾದಿತನಿಗೆ ಸಂಬಂಧಿಸಿದುದಾಗಿರುತ್ತದೆ.ಖಾಸಗಿ ಪ್ರತಿರಕ್ಷೆಯ ಅಧಿಕಾರದ ವಾದವನ್ನು ತೆಗೆದುಕೊಳ್ಳುವ ಆಪಾದಿತನ ಸಾಕ್ಷ್ಯವನ್ನು ಕರೆಯುವ ಅಗತ್ಯವಿರುವುದಿಲ್ಲ; ಅವನು ಪ್ರಾಸಿಕ್ಯೂಷನ್ ಸಾಕ್ಷ್ಯದಿಂದಲೇ ತಿಳಿದುಬಂದಿರುವ ಸನ್ನಿವೇಶಗಳನ್ನು ಉಲ್ಲೇಖಿಸುವ ಮೂಲಕ ತನ್ನ ವಾದವನ್ನು ರುಜುವಾತುಪಡಿಸಬಹುದು.ಅಂಥ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ನ ಸಾಕ್ಷ್ಯದ ನಿಜವಾದ ಪರಿಣಾಮವನ್ನು ನಿರ್ಧರಿಸುವುದು ಪ್ರಶ್ನೆಯಾಗಿರುತ್ತದೆಯೇ ಹೊರತು, ಯಾವುದೇ ಹೊಣೆಗಾರಿಕೆಯನ್ನು ನಿರ್ವಹಿಸುವ ಆ ದಿತ ನ ಪ್ರಶ್ನೆಯಾಗಿರುವುದಿಲ್ಲ.ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಸಮರ್ಥಿಸುವಲ್ಲಿ, ಆಪಾದಿತನು ಆಕ್ರಮಣ ತಡೆಯುವುದಕ್ಕಾಗಿ ಅಥವಾ ಆಪಾದಿತನ ಕಡೆಯಿ ಂ ದ ಆಗುವ ಸಕಾರಣವಾದ ಹೆಚ್ಚಿನ ಭಯದಿಂದಾಗಿ ಆಪಾದಿತನು ತೊಂದರೆ ಉಂಟುಮಾಡುವುದು ಅಗತ್ಯವಾಗಿತ್ತು ಎಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಆವೃತ್ತಿಯು ಇರಬೇಕು.ಆಪಾದಿತನು ಸಕಾರಣ ಸಂದೇಹವನ್ನು ಮೀರಿದ ಖಾಸಗಿ ಪ್ರತಿರಕ್ಷೆಯ ಅಧಿಕಾರದ ಇರುವಿಕೆಯನ್ನು ರುಜುವಾತುಪಡಿಸುವ ಅಗತ್ಯವಿರುವುದಿಲ್ಲ.ಸ ಂ ಭಾವ್ಯತೆಗಳ ಬಾಹುಳ್ಯತೆಯು ಅವನ ವಾದ ಪರವಾಗಿದೆಯೆಂದು ಸಿವಿಲ್ ಪ್ರಕರಣದಲ್ಲಿರುವಂತೆ ತೋರಿಸುವುದು ಅವನಿಗೆ ಸಾಕಷ್ಟಾಗುತ್ತದೆ."

20. ಈಗ ಈ ನ್ಯಾಯಾಲಯದ ಮುಂದೆ ಲಭ್ಯವಿರುವ ದಾಖಲೆಯಲ್ಲಿರುವ ಸಾಕ್ಷ್ಯಾಧಾರವು, ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು ಮೇಲೆ ಉಲ್ಲೇಖಿಸಲಾದ ತೀರ್ಪಿನಲ್ಲಿ ವಿಧಿಸಲಾದ ತತ್ವಗಳ ವ್ಯಾಪ್ತಿಯೊಳಗೆ ಬರುತ್ತದೆಯೇ ಎಂಬುದನ್ನು ಈ ನ್ಯಾಯಾಲಯವು ವಿಶ್ಲೇಷಿಸಬೇಕು ಹಾಗೂ ಸಕಾರಣ ಸಂದೇಹವನ್ನು ಮೀರಿ ರುಜುವಾತುಪಡಿಸುವುದು ಅಗತ್ಯವಿರುವುದಿಲ್ಲ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ ಹಾಗೂ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು ಆಪಾದಿತನ ಪರವಾಗಿರುವ ಸಂಭವನೀಯತೆಗಳ ಬಾಹುಳ್ಯತೆಯು

ಇರಬೇಕು.ರುಜುವಾತಿನ ಹೊಣೆಗಾರಿಕೆಯು ಖಾಸಗಿ-ಪ್ರತಿರಕ್ಷೆಯ ವಾದವನ್ನು ಮಂಡಿಸುವ ಆಪಾದಿತನ ಮೇಲಿರುತ್ತದೆ ಹಾಗೂ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ನ ಸಾಕ್ಷ್ಯವೇ ಸಾಕಷ್ಟಿದ್ದರೆ, ಸಾಕ್ಷ್ಯವನ್ನುಒದಗಿಸುವ ಅಗತ್ಯವಿರುವುದಿಲ್ಲ.ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಅನ್ವಯಿಸುವ ಸಲುವಾಗಿ ಆಪಾದಿತನು ಅಂಥ ರುಜುವಾತಿನ ಹೊಣೆಗಾರಿಕೆಯನ್ನು ಚಲಾಯಿಸಿದ್ದಾನೆಯೇ ಎಂಬುದನ್ನು ಈ ನ್ಯಾಯಾಲಯವು ವಿಶ್ಲೇಷಿಸಬೇಕು.

21. ಸರ್ವೋಚ್ಚ ನ್ಯಾಯಾಲಯವು, 97 ಹಾಗೂ 99 ನೇ ಪ್ರಕರಣಗಳನ್ನು ಉಲ್ಲೇಖಿಸುತ್ತಿರುವಾಗ ಮೇಲಿನ ತೀರ್ಪಿನಲ್ಲಿ ಹೀಗೆ ಅಭಿಪ್ರಾಯಪಟ್ಟಿದೆ; ಆಪಾದಿತನು ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸುವುದಕ್ಕೆ ಸಂಬಂಧಿಸಿದ ಪೂರ್ವಭಾವನೆ ಆಪಾದಿತ ವ್ಯಕ್ತಿಯು ದೇಹದಲ್ಲಿ ಗಾಯಗಳಾದಾಗಲೆಲ್ಲಾ, ಆಪಾದಿತ ವ್ಯಕ್ತಿಗಳು ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಿ ಗಾಯಗಳನ್ನು ಮಾಡಿದ್ದಾರೆನ್ನುವ ಪೂರ್ವಭಾವನೆಯನ್ನು ಅಗತ್ಯವಾಗಿ ಎತ್ತುವುದು ಸಾರ್ವತ್ರಿಕ ನಿಯಮವಾಗಿದೆಯೆಂದು ಹೇಳಲು ಸಾಧ್ಯವಿಲ್ಲ ಆಪಾದಿತನಿಗೆ ಹಾಗೆ ಮಾಡಲಾದ ಗಾಯಗಳು ಖಾಸಗಿ ಪ್ರತಿರಕ್ಷೆಯ ಅಧಿಕಾರದ ಆವೃತ್ತಿಯನ್ನು ಸಂಭವನೀಯಗೊಳಿಸಿವೆಯೆಂಬುದನ್ನು ಮತ್ತಷ್ಟು ರುಜುವಾತುಪಡಿಸಬೇಕು.ಯಾರು ಆಕ್ರಮಣಕಾರರಾಗಿದ್ದರು ಎಂಬುದನ್ನು ನಿರ್ಧರಿಸಲು ಗಾಯಗಳ ಸಂಖ್ಯೆಯು ಯಾವಾಗಲೂ ಸುರಕ್ಷಕ ಮಾನದಂಡವಾಗುವುದಿಲ್ಲ.

22. 102 ನೇ ಪ್ರಕರಣವನ್ನು ಉಲ್ಲೇಖಿಸುವಾಗ ಮೇಲಿನ ತೀರ್ಪಿನಲ್ಲಿ ಸರ್ವೋಚ್ಚ ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

66 " ಅಪರಾಧವನ್ನು ಮಾಡಿರದಿದ್ದರೂ ದೇಹದ ಖಾಸಗಿ ಪ್ರತಿರಕ್ಷೆಯ ಅಧಿಕಾರದ ಪ್ರಾರಂಭ ಮತ್ತು ಮುಂದುವರಿಯುವಿಕೆ ಅಪರಾಧವನ್ನು ಮಾಡುವ ಪ್ರಯತ್ನದಿಂದ ಅಥವಾ ಬೆದರಿಕೆಯಿಂದ ದೇಹಕ್ಕೆ ಅಪಾಯವುಂಟಾಗುವ ಸಕಾರಣ ಭಯವು ಉದ್ಭವಿಸಿದೊಡನೆಯೇ ಅಧಿಕಾರವು ಪ್ರಾರಂಭವಾಗುತ್ತದೆ ಸಕಾರಣ ಭಯವಿರುವವರೆಗೂ ಅಷ್ಟೇ ಅಲ್ಲ, ದೇಹಕ್ಕೆ ಅಂಥ ಅಪಾಯದ ಸಕಾರಣ ಭಯವು ಮುಂದುವರಿದಿರುವ ಹಾಗಿದ್ದರೆ ಮಾತ್ರ ಹಕ್ಕು ಇರುತ್ತದೆಯೆಂದು ಅಭಿಪ್ರಾಯಪಟ್ಟಿದೆ.

XXXXX ಆಪಾದಿತನು, ತನಗೆ ಮರಣ ಅಥವಾ ತೀವ್ರತರವಾದ ಗಾಯವನ್ನುಂಟುಮಾಡುವ ಭಯಕ್ಕೆ ಸಕಾರಣ ಆಧಾರಗಳ ಸನ್ನಿವೇಶಗಳಿದ್ದವೆಂಬುದನ್ನು ತೋರಿಸಬೇಕು ಮರಣಕ್ಕೆ ಕಾರಣವಾಗುವ ಖಾಸಗಿ ಪ್ರತಿರಕ್ಷೆಯ ಅಧಿಕಾರ ಹೊಂದಿದ್ದದನ್ನು ತೋರಿಸುವ ಹೊಣೆಗಾರಿಕೆಯು ಆಪಾದಿತನ ಮೇಲಿರುತ್ತದೆ. "

ಈ ನ್ಯಾಯಾಲಯವು ಮರಣ ಅಥವಾ ತೀವ್ರತರ ಗಾಯಗಳಾಗುತ್ತಿದ್ದವೆಂಬ ಭಯದ ಸಕಾರಣ ಆಧಾರಗಳಿದ್ದವೇ ಎಂಬ ಬಗ್ಗೆ ಸಾಕ್ಷ್ಯವನ್ನು ವಿಶ್ಲೇಷಿಸುವಾಗ ೧ 97 ಹಾಗೂ 99 ನೇ ಪ್ರಕರಣಗಳನ್ನು ಹಾಗೂ 100 ಹಾಗೂ 102 ನೇ ಪ್ರಕರಣಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

23. ಗಾಯಗಳ ಸಂಖ್ಯೆಯು ಯಾವಾಗಲೂ ಸುರಕ್ಷತೆಯ ಮಾನದಂಡ ವಾಗಿರುವುದಿಲ್ಲ.ಆಪಾದಿತ ವ್ಯಕ್ತಿಯ ದೇಹದ ಮೇಲೆ ಗಾಯಗಳು ಕಂಡುಬಂದಾಗ, ಆಪಾದಿತ ವ್ಯಕ್ತಿಗಳು ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಎತ್ತಲೇಬೇಕು ಎಂಬುದು ಸಾರ್ವತ್ರಿಕ ನಿಯಮವಾಗಿದೆಯೆಂದು ತಿಳಿಸಲಾಗುವುದಿಲ್ಲ ಅಷ್ಟೇ ಅಲ್ಲದೆ ಆಪಾದಿತನಿಗೆ ಹಾಗೆ ಆದ ಗಾಯಗಳು, ಖಾಸಗಿ ಪ್ರತಿರಕ್ಷೆಯ ಅಧಿಕಾರದ ಆವೃತ್ತಿಯನ್ನು ಸಂಭಾವ್ಯಗೊಳಿಸಿವೆಯೆಂಬುದನ್ನು ಪ್ರತಿರಕ್ಷೆಯು ಮತ್ತಷ್ಟು ರುಜುವಾತುಪಡಿಸಬೇಕು.ಘಟನೆ ನಡೆದ

ಸರಿಸುಮಾರು ಸಮಯದಲ್ಲಿ ಅಥವಾ ವಾಕ್ಕಲಹದ ಅವಧಿಯಲ್ಲಿ ಆಪಾದಿತನಿಗೆ ಆದ ಗಾಯಗಳ ವಿವರಣೆ ಮಾಡದಿರುವುದು ತುಂಬಾ ಮುಖ್ಯವಾದ ಸನ್ನಿವೇಶವಾಗಿದೆ.ಆದರೆ ಪ್ರಾಸಿಕ್ಯೂಷನ್ನು ಗಾಯಗಳ ವಿವರಣೆ ಮಾಡದಿರುವುದು ಮಾತ್ರವೇ ಎಲ್ಲಾ ಸ ಂ ದ ರ್ಭಗಳಲ್ಲಿ ಪ್ರಾಸಿಕ್ಯೂಷನ್ ಗೆ ಪರಿಣಾಮಕಾರಿಯಾಗಿಲ್ಲದಿರಬಹುದು.ಈ ತತ್ವವು, ಆಪಾದಿತನು ಮಾಡಿದ ಗಾಯಗಳು ಸಣ್ಣಪುಟ್ಟವಾಗಿದ್ದಲ್ಲಿ ಹಾಗೂ ಮೇಲುಮೇಲಿನವಾಗಿದ್ದಲ್ಲಿ ಅಥವಾ ಸಾಕ್ಷ್ಯವು ತುಂಬಾ ಸ್ಪಷ್ಟವಾಗಿದ್ದಲ್ಲಿ ಹಾಗೂ ಸಮರ್ಪಕವಾಗಿದ್ದು, ಪ್ರತ್ಯೇಕ ಹಾಗೂ ಅನಾಸಕ್ತಿಯುಳ್ಳವಾಗಿದ್ದಲ್ಲಿ, ಸಂಭವನೀಯ, ಸುಸಂಗತ ಹಾಗೂ ನಂಬಿಕೆಗೆ ಅರ್ಹವಾಗಿದ್ದಲ್ಲಿ, ಗಾಯಗಳನ್ನು ವಿವರಿಸಲು ಪ್ರಾಸಿಕ್ಯೂಷನ್ನ ಕಡೆಯಿಂದಾದ ಲೋಪದ ಪರಿಣಾಮಕ್ಕೆ ಈ ತತ್ವವು ಅನ್ವಯವಾಗುತ್ತದೆ.

24. ಹಿಂದೆ ಹೇಳಲಾದ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಈ ನ್ಯಾಯಾಲಯವು, ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಬೇಕು.ಸಾಕ್ಷ್ಯದಲ್ಲಿ ಇರುವ ಸಾಕ್ಷ್ಯಾಧಾರವನ್ನು ಅವಗಾಹನೆ ಮಾಡಿದ ಮೇಲೆ, ದೂರುದಾರನು 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಮನೆಗೆ ಹೋಗಿದ್ದು, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಮನೆಯ ಪ್ರಾಂಗಣದಲ್ಲಿ ಘಟನೆ ನಡೆದಿದೆಯೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು ಈಗಾಗಲೇ ಮನೆಯಲ್ಲಿದ್ದರು ಹಾಗೂ ಪ್ರತಿವಾದಿ ಸಾಕ್ಷಿದಾರರು ಇದ್ದರು ಎಂಬುದರಲ್ಲಿ ಯಾವುದೇ ವಿವಾದವಿಲ್ಲವೆಂಬುದು ಪ್ರಾಸಿಕ್ಯೂಷನ್ನ ವಾದ. 1 ನೇ ಸಂಖ್ಯೆಯ ಆಪಾದಿತನು ಮನೆಯೊಳಗಿದ್ದನು ಎಂಬುದು ಪ್ರಾ.ಸಾ .2 ರ ಸಾಕ್ಷಿಯಾಗಿದೆ.ಪ್ರತಿವಾದವು, 1 ನೇ ಸಂಖ್ಯೆಯ ಆಪಾದಿತನು ಮನೆಯಲ್ಲಿರಲಿಲ್ಲ.ಆದರೆ ಅವನು ನಂತರ ಬಂದನು ಎಂದು ಕ್ಲೇಮು ಮಾಡಿದೆ.1 ನೇ ಸಂಖ್ಯೆಯ ಆಪಾದಿತನು ಬಂದು, ಪಾಲನ್ನು ಕೊಡುವುದಕ್ಕೆ ಸಂಬಂಧಪಟ್ಟಂತೆ ಮಾತನಾಡಲು ಅವನ ಮನೆಗೆ ಕರೆದನೆಂಬುದು ದೂರುದಾರನ ಸಾಕ್ಷ್ಯದಲ್ಲಿದೆ.ಪ್ರಾಸಿಕ್ಯೂಷನ್ ಸಾಕ್ಷ್ಯ ಎ ಹಾಗೂ ಪ್ರತಿವಾದದ ಸಾಕ್ಷ್ಯವನ್ನು ಸಹ ಅವಗಾಹಿಸಿದ ಮೇಲೆ, ದೂರುದಾರನಿಗೆ ಪಾಲನ್ನು ಕೊಡುವ ಸಂಬಂಧದಲ್ಲಿ ಪಕ್ಷಕಾರರ ನಡುವೆ ವಿವಾದವಿತ್ತೆಂಬ ಸಂಗತಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿರಲಿಲ್ಲ ಹಾಗೂ ಅವರು ಸಂಬಂಧಿಕರಾಗಿದ್ದರು ಎಂಬುದರಲ್ಲಿ ಯಾವುದೇ ವಿವಾದವಿಲ್ಲ ಎಂಬುದು ತಿಳಿದುಬರುತ್ತದೆ.

25. ಪ್ರಾ.ಸಾ .2 ರ ಸಾಕ್ಷ್ಯ-ಗಾಯಾಳು, ಹೇಳುವುದೇನೆಂದರೆ, ಅವನು ಮನೆಯೊಳಗೆ ಹೋದಾಗ, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರು 1 ನೇ ಸಂಖ್ಯೆಯ ಮನೆಯ ಪ್ರಾಂಗಣಕ್ಕೆ ಅವನನ್ನು ಕರೆದರು.1 ನೇ ಸಂಖ್ಯೆಯ ಆಪಾದಿತನು ಹಿಂದಿನಿಂದ ತನ್ನೆರಡು ಕೈಗಳನ್ನು ಹಿಡಿದುಕೊಂಡನು ಹಾಗೂ 2 ನೇ ಸಂಖ್ಯೆಯ ಆಪಾದಿತಳು ಕುಡುಗೋಲನ್ನು ತಂದು ತನ್ನ ಕೈಗಳು ಹಾಗೂ ಕಾಲುಗಳಿಗೆ ಥಳಿಸಿದರು ಹಾಗೂ ತಾನು ಸ್ಥಳದಲ್ಲಿ ಕಿರುಚಿಕೊಂಡು ಕೆಳಗೆ ಬಿದ್ದೆನು.ದೂರುದಾರನು ಕೆಳಗೆ ಬಿದ್ದರೂ ಕೂಡ 2 ನೇ ಸಂಖ್ಯೆಯ ಆಪಾದಿತಳು ಕುಡುಗೋಲಿನಿಂದ ಮತ್ತೆ ಗಾಯಗಳನ್ನು ಮಾಡಿದಳು.ದೂರುದಾರನ ಅಂಗಿ ಹಾಗೂ ಷರಾಯಿಗಳೆರಡಕ್ಕೂ ರಕ್ತದ ಕಲೆಗಳಾದವು.ಕಿರುಚಾಟದ ಶಬ್ದವನ್ನು ಕೇಳಿ, ತನ್ನ ಪತ್ನಿ ಹಾಗೂ ಭಾವಮೈದುನ ಎಂದರೆ ಪ್ರಾ.ಸಾ .1 ಹಾಗೂ 3 ಬಂದು, ಅನತಿದೂರದಲ್ಲಿ ಇದನ್ನು ನೋಡಿದ ನಂತರ ಅವರು ಓಡಿಹೋದರು.ತದನಂತರ, ಪೊಲೀಸರು ಸ್ಥಳಕ್ಕೆ ಬಂದು ಆಂಬುಲೆನ್ಸ್ನಲ್ಲಿ ಆಸ್ಪತ್ರೆಗೆ ತನ್ನನ್ನು ಕಳುಹಿಸಿದರು.ಪಾಟೀಸವಾಲಿನಲ್ಲಿ, ಅವನು ಪಾಲು ನೀಡಲು ಹೆದರಿಸಿರುವುದಾಗಿ ತಿಳಿಸಲಾಗಿದೆ ಹಾಗೂ ಸದರಿ ಸೂಚನೆಯನ್ನು ನಿರಾಕರಿಸಲಾಗಿತ್ತು.1 ನೇ ಸಂಖ್ಯೆಯ ಆಪಾದಿತನು ದೂರುದಾರನು ಬೆದರಿಕೆ ಹಾಕಿದಾಗ ರಕ್ಷಣೆಯನ್ನು ಕೋರಿ ಮೂಡಬಿದರೆ ಪೊಲೀಸರಿಗೆ ದೂರನ್ನು ನೀಡಿರುವುದಾಗಿ ಸೂಚಿಸಿದ್ದು, ಸದರಿ ಸೂಚನೆಯನ್ನು ನಿರಾಕರಿಸಲಾಗಿದೆ.ಆಸ್ತಿಯನ್ನು ಪಾಲು

ಮಾಡುವುದಕ್ಕೆ ಸಂಬಂಧಿಸಿದಂತೆ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ವಿರುದ್ಧ ದ್ವೇಷಭಾವನೆ ಹೊಂದಿದ್ದುದಾಗಿ ತಿಳಿಸಿದ್ದು, ಇದನ್ನು ನಿರಾಕರಿಸಲಾಗಿದೆ.ಅವನು ಆಪಾದಿತನ ಮನೆಗೆ ಹೋದಾಗ, ಜಯಾ ಎಂಬೊಬ್ಬರೊಂದಿಗೆ ಹೋಗಿದ್ದನು, ಇದನ್ನೂ ನಿರಾಕರಿಸಲಾಗಿತ್ತು ಎಂದು ಸೂಚನೆ ನೀಡಲಾಗಿದೆ.ಆದಾಗ್ಯೂ, ಅವನು ತಾನು 1 ನೇ ಆಪಾದಿತನ ಮನೆಗೆ ಹೋದಾಗ, 2 ನೇ ಆಪಾದಿತರು, ಅವನು ಸ್ವತ್ತಿನಲ್ಲಿ ಯಾವುದೇ ಅಧಿಕಾರವನ್ನು ಹೊಂದಿಲ್ಲವೆಂದು ಹೇಳಿದರು ಎಂಬುದನ್ನು ಒಪ್ಪಿಕೊಂಡಿದ್ದಾರೆ.1 ನೇ ಸಂಖ್ಯೆಯ ಆಪಾದಿತನ ಮನೆಗೆ ಹೋಗುತ್ತಿರುವಾಗ, ಅವನು ಕುಡುಗೋಲಿನೊಂದಿಗೆ ಹೋಗಿದ್ದನು ಎಂಬ ಹೇಳಿಕೆಯನ್ನು ನೀಡಿದ್ದು, ಇದನ್ನು ನಿರಾಕರಿಸಲಾಗಿದೆ.ಅವನು, 1 ನೇ ಸಂಖ್ಯೆಯ ಆಪಾದಿತನ ಮನೆಗೆ ಹೋದಾಗ, ಅವನು ಮನೆಯಲ್ಲಿರಲಿಲ್ಲ ಹಾಗೂ ಬರೀ ಹೆಣ್ಣು ಮಕ್ಕಳು ಮಾತ್ರ ಮನೆಯಲ್ಲಿದ್ದರು ಎಂಬ ಮುಂದಿನ ಹೇಳಿಕೆಯನ್ನು ನೀಡಿದ್ದು, ಇದನ್ನು ನಿರಾಕರಿಸಲಾಗಿದೆ.2 ನೇ ಸಂಖ್ಯೆಯ ಆಪಾದಿತಳೊಂದಿಗೆ ಜಗಳ ಮಾಡುತ್ತಿರುವಾಗ, ಅವನು ತನ್ನ ಕೈಗಳನ್ನು ಕುತ್ತಿಗೆ ಮೇಲಿಟ್ಟು ಬೆದರಿಕೆ ಹಾಕಿದನೆಂದು ಹೇಳಿಕೆಯನ್ನು ಇದನ್ನೂ ಸಹ ನಿರಾಕರಿಸಲಾಗಿದೆ.ಅಷ್ಟೇ ಅಲ್ಲದೆ, 2 ನೇ ಸಂಖ್ಯೆಯ ಆಪಾದಿತನಿಗೆ ಥಳಿಸಲು ಬಂದಾಗ, ದೇಹವನ್ನು ಸಂರಕ್ಷಿಸಿಕೊಳ್ಳಲು 2 ನೇ ಸಂಖ್ಯೆಯ ಆಪಾದಿತನನ್ನು ತಡೆದನೆಂದು ಹೇಳಿಕೆಯನ್ನು ನೀಡಿದ್ದಾನೆ.ಆ ಸಮಯದಲ್ಲಿ, 1 ನೇ ಸಂಖ್ಯೆಯ ಆಪಾದಿತನು ಮನೆಗೆ ಬಂದನು ಎಂದು ಸೂಚಿಸಿದ್ದು, ಇದನ್ನು ನಿರಾಕರಿಸಲಾಗಿದೆ.ಅಷ್ಟೇ ಅಲ್ಲದೆ, 1 ನೇ ಸಂಖ್ಯೆಯ ಆಪಾದಿತನು ಮನೆಗೆ ಬಂದರೂ, ಅವನು 2 ನೇ ಸಂಖ್ಯೆಯ ಆಪಾದಿತರನ್ನು ಥಳಿಸುವುದನ್ನು ಮುಂದುವರಿಸಿದ್ದು, ಅವಳನ್ನು ತಳ್ಳಲು ಹೋಗಿದ್ದನು ಎಂದು ಸೂಚಿಸಲಾಗಿದ್ದು, ಇದನ್ನೂ ನಿರಾಕರಿಸಲಾಗಿದೆ.ಸಮಯದೊಳಗೆ, 2 ನೇ ಸಂಖ್ಯೆಯ ಆಪಾದಿತಳು ದೂರುದಾರನ ಕೈಗಳಲ್ಲಿದ್ದ ಕುಡುಗೋಲನ್ನು ಕಿತ್ತುಕೊಂಡು ಅವನನ್ನು ಥಳಿಸಿದ್ದು, ಅವನೊಂದಿಗೆ ಬಂದಿದ್ದ ಜಯಾ ಎಂಬಾಕೆಯು ಸ್ಥಳದಿಂದ ಓಡಿಹೋದಳು ಎಂಬ ಹೇಳಿಕೆಯನ್ನು ನೀಡಿದ್ದು, ಈ ಎಲ್ಲಾ ಹೇಳಿಕೆಯನ್ನು ನಿರಾಕರಿಸಲಾಗಿದೆ.

26. ದಾಖಲೆಯಲ್ಲಿರುವ ಸಾಕ್ಷ್ಯವನ್ನು ಅದರಲ್ಲೂ ನಿರ್ದಿಷ್ಟವಾಗಿ ಪ್ರಾ.ಸಾ .2 ರ ಸಾಕ್ಷ್ಯವನ್ನು ಗಮನಕ್ಕೆ ತೆಗೆದುಕೊಂಡರೆ 1 ನೇ ಹಾಗೂ 2 ನೇ ಸಂಖ್ಯೆಯ ಜೀವವನ್ನು ತೆಗೆಯುವ ಭಯವಿತ್ತೆಂಬುದನ್ನು ಎಲ್ಲಿಯೂ ಹೊರಗೆಡಹಿರುವುದಿಲ್ಲ.1 ನೇ ಸಂಖ್ಯೆಯ ಆಪಾದಿತನು ಮನೆಗೆ ಆಗಮಿಸಿದರೂ ದೂರುದಾರನು 2 ನೇ ಸಂಖ್ಯೆಯ ಆಪಾದಿತಳ ಬಳೆಗಳನ್ನು ಮುರಿದು ಹಾಕಿದ್ದು ಅವಳನ್ನು ತಳ್ಳಿರುವುದಾಗಿ ಸೂಚಿಸಲಾಗಿದೆ.ದೂರುದಾರನು ತನ್ನ ಕೈಯಲ್ಲಿದ್ದ ಆಪಾದಿತ ಕುಡುಗೋಲನ್ನು ಬಳಸಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಜೀವವನ್ನು ತೆಗೆಯುವ ಪ್ರಯತ್ನ ಮಾಡಿದನು ಎಂಬುದು ಪ್ರತಿವಾದವಾಗಿರುವುದಿಲ್ಲ.ಪ್ರಾ.ಸಾ .2 ರ ಪಾಟೀ-ಸವಾಲಿನಲ್ಲಿ, ಅವನು ಕುಡುಗೋಲಿನಿಂದ ಗಾಯವನ್ನು ಉಂಟುಮಾಡಲು ಮುಂದಾದನು ಎಂಬ ಬಗ್ಗೆ ಏನನ್ನೂ ಹೇಳಿರುವುದಿಲ್ಲ.1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಮನೆಗೆ ಬರುತ್ತಿರುವಾಗ ಪ್ರಾ.ಸಾ .2 ಕುಡುಗೋಲಿನ ಸಮೇತ ಹೋಗಿದ್ದನು ಎಂಬುದಕ್ಕೆ ನ್ಯಾಯಾಲಯದ ಮುಂದೆ ಯಾವುದೆ ಸಾಕ್ಷ್ಯಾಧಾರ ಇಲ್ಲ ಎಂಬುದನ್ನು ಗಮನಿಸುವುದು ಪ್ರಮುಖವಾಗಿದೆ.1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಮನೆಗೆ ಪ್ರಾ.ಸಾ .2 ಕುಡುಗೋಲಿನ ಸಮೇತ ಹೋಗಿದ್ದನು ಎಂಬಷ್ಟರಮಟ್ಟಿಗೆ ಸಾಕ್ಷಿದಾರರು ಯಾರನ್ನು ಸಹ ವಿಚಾರಣೆ ಮಾಡಿರುವುದಿಲ್ಲ.

27. 1 ನೇ ಸಂಖ್ಯೆಯ ಆಪಾದಿತನು ಮನೆಯೊಳಗಿದ್ದನೆಂದು ಪ್ರಾ.ಸಾ .2 ನಿರ್ದಿಷ್ಟವಾಗಿ ತಿಳಿಸಿದ್ದಾನೆ.ಅವನು ಬಂದು ಹಿಂದಿನಿಂದ ಭದ್ರವಾಗಿ ತನ್ನ ನ್ನು ಹಿಡಿದುಕೊಂಡನು ಹಾಗೂ 2 ನೇ ಸಂಖ್ಯೆಯ ಆಪಾದಿತನು

ಕುಡುಗೋಲಿನಿಂದ ಗಾಯಗಳನ್ನುಂಟು ಮಾಡಿದನು.ಪ್ರಾ.ಸಾ .2 ರ ಕೈಗಳಿಂದ ಕುಡುಗೋಲನ್ನು ಕಿತ್ತುಕೊಂಡಿರುವುದಾಗಿ ತದನಂತರ ತನಗೆ ಗಾಯಗಳಾಗಿದ್ದವೆಂದು ಸೂಚಿಸಿದ್ದರೂ ಇದನ್ನು ನೇರವಾಗಿ ಅವನು ನಿರಾಕರಿಸಿದ್ದಾನೆ.ಜಯಾ ಎಂಬೊಬ್ಬಳು ತನ್ನೊಂದಿಗೆ ಇದ್ದಳು ಎಂಬುದನ್ನು ತನ್ನ ಪಾಟೀ-ಸವಾಲಿನಲ್ಲಿ ಸೂಚಿಸಲಾಗಿತ್ತು.ಅವನನ್ನು ಸಾಕ್ಷಿದಾರನಾಗಿ ವಿಚಾರಣೆ ಮಾಡಿರುವುದಿಲ್ಲ ಅಥವಾ ಸಾಕ್ಷಿದಾರನೆಂದೂ ಉದ್ಧರಿಸಿರುವುದಿಲ್ಲ.ಆಪಾದಿತನು ಮನೆಯಲ್ಲಿರಲಿಲ್ಲವೆಂದು ನಿರ್ದಿಷ್ಟವಾಗಿ ಹೇಳಿರುವುದನ್ನು ಪ್ರಾ.ಸಾ .2 ನಿರಾಕರಿಸಿದ್ದಾನೆ.2 ನೇ ಸಂಖ್ಯೆಯ ಆಪಾದಿತನನ್ನು ಪ್ರಾ.ಸಾ .2 ತನ್ನ ಕೈಗಳಿಂದ ಅವಳ ಕುತ್ತಿಗೆಯ ಮೇಲೆ ಹಲ್ಲೆ ನಡೆಸಿದರೆಂಬ ಹೇಳಿಕೆಯನ್ನು ಗಮನಿಸುವುದು ಮತ್ತೂ ಪ್ರಮುಖವಾಗಿದೆ.ಪ್ರಾ.ಸಾ .2 ಕುಡುಗೋಲಿನಿಂದ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನನ್ನು ಥಳಿಸಲು ಪ್ರಯತ್ನಿಸಿದನು ಎಂಬುದು ಆಪಾದಿತನ ಪ್ರತಿವಾದವಾಗಿರುವುದಿಲ್ಲ.ಆದುದರಿಂದ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು 1 ಹಾಗೂ 2 ನೇ ಸಂಖ್ಯೆಯ ಆಪಾದಿತನ ಜೀವಕ್ಕೆ ಯಾವುದೇ ಅಪಾಯವಿತ್ತು ಎನ್ನುವ ಸಕಾರಣ ಭಯವಿತ್ತೆಂಬ ನಿರ್ಣಯಕ್ಕೆ ಬರಲು ಯಾವುದೇ ಕಾರಣವನ್ನು ನಾವು ಗುರುತಿಸಿಲ್ಲ.

28. ಖಾಸಗಿ ಪ್ರತಿರಕ್ಷೆಯನ್ನು ಚಲಾಯಿಸಲು ಅಧಿಕಾರವನ್ನು ಸಮರ್ಥಿಸುವ ಸನ್ನಿವೇಶಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆ ಆಪಾದಿತನ ಮೇಲಿರುತ್ತದೆ.ಹೀಗಾಗಿ ಕಟಕಟೆಗೆ ಅವರು ಪ್ರವೇಶಿಸುವ ಹಾಗೂ ಅದನ್ನು ವಿವರಿಸುವ ಅಗತ್ಯವಿರುವುದಿಲ್ಲ.ಅದೇ ಸಮಯದಲ್ಲಿ ಆಪಾದಿತನು, ನೀಡಲಾದ ಸನ್ನಿವೇಶಗಳಲ್ಲಿ ಅವರ ಜೀವಗಳಿಗೆ ಅಪಾಯವಿತ್ತೆಂಬ ಸಂಗತಿಯನ್ನು ರುಜುವಾತುಪಡಿಸಬೇಕು.2 ನೇ ಸಂಖ್ಯೆಯ ಆಪಾದಿತಳು ಸ್ವತ್ತಿನಲ್ಲಿ ಅವನಿಗೆ ಪಾಲು ಕೊಡುವುದನ್ನು ನಿರಾಕರಿಸಿದ್ದರು ಎಂದು ಬಹಿರಂಗಪಡಿಸಿರುವುದನ್ನು ಹೊರತುಪಡಿಸಿದರೆ 1 ಹಾಗೂ 2 ನೇ ಸಂಖ್ಯೆಯ ಆಪಾದಿತರು ಅವನನ್ನು ಥಳಿಸಲು ಪ್ರಯತ್ನಿಸಿದರೆಂಬುದನ್ನು ತೋರಿಸಲು ಪ್ರಾ.ಸಾ .2 ರ ಪಾಟೀ-ಸವಾಲಿನಲ್ಲಿ ಏನನ್ನೂ ಪ್ರಕಟಿಸಿರುವುದಿಲ್ಲ.ಅಷ್ಟೇ ಅಲ್ಲದೆ, ಪ್ರಾ.ಸಾ .2, ಜಯಾ ಎಂಬೊಬ್ಬರೊಂದಿಗೆ ಅವರ ಮನೆಗೆ ಬಂದಿದ್ದುದನ್ನು ತೋರಿಸಲು ಆಪಾದಿತನು ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿರುವುದಿಲ್ಲ.ಪ್ರಾ.ಸಾ .2, ಸದರಿ ಜಯಾ ಎಂಬುವವರೊಂದಿಗೆ ಆಪಾದಿತರ ಮನೆಗೆ ಹೋಗಿದ್ದರು ಎಂಬುದನ್ನು ಯಾವ ಸಾಕ್ಷಿದಾರರೂ ಹೇಳಿರುವುದಿಲ್ಲ.ಪ್ರಾ.ಸಾ .2 ಆಪಾದಿತನನ್ನು ಗಾಯಗೊಳಿಸಿರುವನೆಂಬ ಸಕಾರಣ ಭಯವಿತ್ತೆಂಬುದನ್ನು ತೋರಿಸಲು ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವೂ ಕೂಡ ಏನನ್ನೂ ಬಹಿರಂಗಪಡಿಸಿರುವುದಿಲ್ಲ.1 ಹಾಗೂ 2 ನೇ ಸಂಖ್ಯೆಯ ಆಪಾದಿತರಿಗೆ ಯಾವುದೇ ಗಾಯಗಳಾಗಿರಲಿಲ್ಲ ಎಂಬುದನ್ನೂ ಸಹ 2 ನೇ ಸಂಖ್ಯೆಯ ಆಪಾದಿತಳ ಬಳೆಗಳು ಮುರಿದುಹೋಗಿದ್ದವು ಹಾಗೂ 2 ನೇ ಸಂಖ್ಯೆಯ ಆಪಾದಿತಳನ್ನು ಪ್ರಾ.ಸಾ .2 ತಳ್ಳಿದ್ದನು ಎಂದು ಅವನಿಗೆ ಸೂಚನೆ ನೀಡಲಾಗಿತ್ತು ಎಂಬುದನ್ನೂ ಗಮನಿಸಬೇಕಾಗಿದೆ.1 ಹಾಗೂ 2 ನೇ ಸಂಖ್ಯೆಯ ಆಪಾದಿತರು ಆಪಾದಿತ ಘಟನೆಯ ಬಗ್ಗೆ ಪೊಲೀಸರಿಗೆ ಯಾವುದೇ ದೂರನ್ನು ನೀಡಿರಲಿಲ್ಲ ಹಾಗೂ ಅವರನ್ನು ಯಾವುದೇ ಚಿಕಿತ್ಸೆಗಾಗಿ ಯಾವುದೇ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.ಹಾಗೂ ಪ್ರಾ.ಸಾ .2 ಇಬ್ಬರ ಮೇಲೂ ಹಲ್ಲೆ ಮಾಡಿದ್ದರು ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿರುವುದಿಲ್ಲ.ಪ್ರತಿವಾದಿ ಸಾಕ್ಷ್ಯ ಎಲಾ 1 ಮನೆಯಿಂದ ಹೊರಬಂದು ಪೊಲೀಸಿನವರಿಗೆ ದೂರವಾಣಿ ಮಾಡಲಾಗಿದ್ದ, 1 ರಿಂದ 3 ರವರೆಗಿನ ಪ್ರಾ.ಸಾ .1 ಸದರಿ ಸಂಗತಿಯನ್ನು ನಿರಾಕರಿಸಿದ್ದರು ಎಂದು ಹೊರಬಿದ್ದ ಸಾಕ್ಷ್ಯದಲ್ಲಿ ಯಾವುದೇ ವಿವಾದವಿಲ್ಲ, ಪೊಲೀಸು ಸಾಕ್ಷಿದಾರನ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ್ದು, ಪ್ರಾ.ಸಾ .1 ರ ಮೂಲಕ ಘಟನೆಯ ಬಗ್ಗೆ ಅವರಿಗೆ ತಿಳಿದು ಬಂದಿರುವುದನ್ನು ತೋರಿಸಲಾಗಿದೆ.

29. ಈ ಹಂತದಲ್ಲಿ, ಈ ನ್ಯಾಯಾಲಯವು, ಪ್ರತಿವಾದಿ ಸಾಕ್ಷ ಲ್ಯು 1 ರ ಪ್ರತಿವಾದವನ್ನು ಪರಾಮರ್ಶಿಸಲು ಬಯಸುತ್ತದೆ.ದಿನಾಂಕ 17.02.1999 ರಂದು ಮಧ್ಯಾಹ್ನ ಸುಮಾರು 2 ರಿಂದ 3 ಗಂಟೆ ಸಮಯದಲ್ಲಿ, ಅವಳು ಮನೆಯಲ್ಲಿದ್ದಾಗ, ದೂರುದಾರ-ಪ್ರಾ.ಸಾ .2, ತಮ್ಮ ಮನೆಗೆ ಬಂದಿದ್ದು, ಆ ಸಮಯದಲ್ಲಿ ಅವನು ತನ್ನ ಕೈಯ್ಯಲ್ಲಿ ಕುಡುಗೋಲನ್ನು ಹಿಡಿದುಕೊಂಡಿದ್ದನೆಂಬುದನ್ನು ಪ್ರತಿವಾದಿ ಸಾಕ್ಷ್ಯ .1 ರ ಸಾಕ್ಷ್ಯವು ತೋರಿಸುತ್ತದೆ.ಪ್ರಾ.ಸಾ .2 ಅವಳ ತಾಯಿಯನ್ನು ಆಸ್ತಿಯಲ್ಲಿ ಪಾಲು ಕೊಡಲು ಕೇಳಿದ್ದು, ಸದರಿ ಪಾಲನ್ನು ಅವನಿಗೆ ನೀಡದಿದ್ದರೆ 2 ನೇ ಸಂಖ್ಯೆಯ ಆಪಾದಿತಳನ್ನು ಅವನು ಕೊಲ್ಲುವುದಾಗಿ ಬೆದರಿಕೆ ಹಾಕಿರುವನು.ಪ್ರತಿವಾದಿ ಸಾಕ್ಷ್ಯ .1, ಆ ಸಮಯದಲ್ಲಿ ಅವಳು ಹೆದರಿಕೊಂಡಿರುವುದನ್ನು ತಿಳಿಸಿದ್ದಾಳೆ.ಅವಳ ತಾಯಿಯು, ದೂರುದಾರನಿಗೆ ಆಸ್ತಿಯಲ್ಲಿ ಯಾವುದೇ ಪಾಲನ್ನು ನೀಡುವುದನ್ನು ನಿರಾಕರಿಸಿದಾಗ, ಅವನು, ಕುಡುಗೋಲಿನಿಂದ ಅವಳಿಗೆ ಗಾಯವನ್ನುಂಟುಮಾಡಲು ಪ್ರಯತ್ನಿಸಿದನು.ಅವಳ ತಾಯಿಯು ಪ್ರಾ.ಸಾ .2 ರ ಕೈಗಳನ್ನು ಹಿಡಿದುಕೊಂಡಿದ್ದು, ಇಬ್ಬರೂ ಕೆಳಗೆ ಬಿದ್ದಿದ್ದು, ಅವಳ ತಾಯಿಯು, ಅವಳಿಗೆ (ಪ್ರತಿವಾದಿ ಸಾಕ್ಷ್ಯ .1) ಹೋಗಿ, ಪೊಲೀಸರಿಗೆ ಮಾಹಿತಿ ತಿಳಿಸು ಎಂದು ಹೇಳಿದ್ದಾಳೆ.ಅವಳು ಮನೆಯನ್ನು ಬಿಟ್ಟು ಬಂದು ಅವಳ ಮನೆಯ ಪಕ್ಕದಲ್ಲಿನ ಎಸ್ಟಿಡಿ ಬೂತ್ಗೆ ಹೋಗಿ, ದೂರವಾಣಿಯ ಮೂಲಕ ಘಟನೆಯ ಕುರಿತು ಪೊಲೀಸರಿಗೆ ತಿಳಿಸಿದ್ದಾಳೆ.ಅವಳು ಹಿಂದಕ್ಕೆ ಬಂದಾಗ, ಅವಳ ತಾಯಿ ಹಾಗೂ ಪ್ರಾ.ಸಾ .2 ನೆಲದ ಮೇಲೆ ಹೊರಳಾಡು/ಉರುಳಾಡುತ್ತಿರುವುದನ್ನು ಕಂಡಿದ್ದಾಳೆ.ಅದಾದ ಕೆಲ ಸಮಯದ ನಂತರ, 1 ನೇ ಸಂಖ್ಯೆಯ ಆಪಾದಿತನು ಸ್ಥಳಕ್ಕೆ ಬಂದಿದ್ದಾನೆ ತದನಂತರ ಪೊಲೀಸರು ಕೂಡ ಸ್ಥಳಕ್ಕೆ ಬಂದಿದ್ದಾರೆ.ಪ್ರತಿವಾದಿ ಸಾಕ್ಷ್ಯ.!ರ ಸಾಕ್ಷ್ಯವನ್ನು ಅವಗಾಹಿಸಿದ ನಂತರ, ಪ್ರಾ.ಸಾ .2 ಅವಳ ತಾಯಿಯಾದ -2 ನೇ ಸಂಖ್ಯೆಯ ಆಪಾದಿತಳಿಗೆ ಗಾಯವನ್ನುಂಟುಮಾಡಿರುವುದಕ್ಕೆ ಅವಳು ಸಾಕ್ಷಿಯಾಗಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.ಅವಳ ತಾಯಿ ಹಾಗೂ ಪ್ರಾ.ಸಾ .2 ನೆಲದ ಮೇಲಿದ್ದುದನ್ನು ಅವಳು ನೋಡಿದ್ದಾಳೆ.ಅವಳು ಪೊಲೀಸರಿಗೆ ತಿಳಿಸುವುದಕ್ಕಾಗಿ ಮನೆಯಿಂದ ಓಡಿಬಂದಿದ್ದು, ಅವಳು ಘಟನೆಗೆ ಸಾಕ್ಷಿಯಾಗಿರಲಿಲ್ಲ.ಹೀಗಾಗಿ ಪ್ರತಿವಾದಿ ಸಾಕ್ಷ್ಯ .1 ರ ಸಾಕ್ಷ್ಯವು, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರ ಜೀವಕ್ಕೆ ಅಪಾಯದ ಭಯವಿತ್ತೆಂಬುದನ್ನು ಸಮರ್ಥಿಸಲು ಆಪಾದಿತ ವ್ಯಕ್ತಿಗಳಿಗೆ ಸಹಾಯಕವಾಗುವುದಿಲ್ಲ.ಪ್ರಾ.ಸಾ .1 ರ ಕೈಗಳನ್ನು ತನ್ನ ತಾಯಿ ಹಿಡಿದುಕೊಳ್ಳದಿದ್ದರೆ, ಅವನು ನನ್ನ ತಾಯಿಯನ್ನು ಕೊಂದಿರುತ್ತಿದ್ದ ಎಂದು ಪ್ರತಿವಾದಿ ಸಾಕ್ಷ್ಯ .1 ಹೇಳಿರುವುದನ್ನು ಮತ್ತೆ ಗಮನಿಸುವುದು ಪ್ರಮುಖವಾಗಿದೆ, ಆದರೆ, ಅವಳು, ತನ್ನ ತಾಯಿ ಹಾಗೂ ಪ್ರಾ.ಸಾ .2 ರ ನಡುವೆ ಕಾದಾಟ ನಡೆಯುವಲ್ಲಿ ಪ್ರಾ.ಸಾ .2 ಗಾಯವನ್ನುಂಟು ಮಾಡಿದನೆಂಬುದನ್ನು ಒಪ್ಪಿಕೊಂಡಿದ್ದಾಳೆ.ಅಷ್ಟೇ ಅಲ್ಲದೆ, ತನ್ನ ತಾಯಿಯು ಪ್ರಾ.ಸಾ .2 ರ ಕೈಗಳನ್ನು ಹಿಡಿದುಕೊಂಡಾಗ, ಅವನ ಕೈಯಿಂದ ಕುಡುಗೋಲು ಜಾರಿದ್ದು, ಅದು ನೆಲದ ಮೇಲೆ ಬಿದ್ದಿತು ಎಂದು ಹೇಳಿಕೆ ನೀಡಿದ್ದಾಳೆ.ತನ್ನ ತಾಯಿಯು ನೆಲದಿಂದ ಕುಡುಗೋಲನ್ನು ಎತ್ತಿಕೊಳ್ಳಲು ಪ್ರಯತ್ನಿಸಿದಾಗ ಪ್ರಾ.ಸಾ .2 ತನ್ನ ತಾಯಿಯನ್ನು ಥಳಿಸಿದ್ದು, ತನ್ನ ತಾಯಿಯು ತಡೆಯುತ್ತಿದ್ದರೂ, ನೆಲದಿಂದ ಕುಡುಗೋಲನ್ನು ಎತ್ತಿಕೊಂಡನೆಂದು ಹಾಗೂ ಪ್ರಾ.ಸಾ .2 ತನ್ನ ತಾಯಿಯನ್ನು ಥಳಿಸಲು ಪ್ರಯತ್ನಿಸಿದಾಗ, ಥಳಿಸುವುದನ್ನು ತಡೆಯುವ ಸಲುವಾಗಿ ಅವಳು ಕುಡುಗೋಲನ್ನು ಅಡ್ಡ ಹಿಡಿದಿದುದರ ಕಾರಣದಿಂದ ಪ್ರಾ.ಸಾ .2 ಕ್ಕೆ ಗಾಯಗಳಾದವು.ಪ್ರತಿವಾದಿ ಸಾಕ್ಷ್ಯದ ಪಾಟೀ-ಸವಾಲಿನಲ್ಲಿ, ಪೊಲೀಸರು ಮನೆಗೆ ಬಂದಾಗ 1 ನೇ ಸಂಖ್ಯೆಯ ಆಪಾದಿತನು ಮನೆಯಲ್ಲಿರಲಿಲ್ಲವೆಂಬುದನ್ನು ಹೊರಗೆಡಹಿದ್ದಾಳೆ.ಅವಳು, ಪ್ರಾ.ಸಾ .2 ಆಪಾದಿತ ಸಂಖ್ಯೆ 1 ನ್ನು ಥಳಿಸಿರಲಿಲ್ಲವೆಂದು ಆದರೆ ಅವನು ತನ್ನ ತಾಯಿಯನ್ನು -2 ನೇ ಸಂಖ್ಯೆಯ ಆಪಾದಿತಳನ್ನು ಮಾತ್ರ ಥಳಿಸಿದನೆಂದು ಕ್ಲೇಮು ಮಾಡಿರುವುದನ್ನು ಒಪ್ಪಿಕೊಂಡಿದ್ದಾಳೆ ಅಷ್ಟೇ ಅಲ್ಲದೆ, ಪ್ರಾ.ಸಾ .2 ತನ್ನ ಕೈಗಳಿಂದ ಕುತ್ತಿಗೆಯ ಮೇಲೆ ತಾಯಿಯನ್ನು ಥಳಿಸಿದನೆಂಬುದನ್ನು ಒಪ್ಪಿಕೊಂಡಿದ್ದಾಳೆ.ಅಷ್ಟೇ ಅಲ್ಲದೆ, ತನ್ನ

ತಾಯಿಯನ್ನು ಪ್ರಾ.ಸಾ .2 ಥಳಿಸುತ್ತಿದ್ದಾಗ, ಯಾರೂ ಬಿಡಿಸಲು ಪ್ರಯತ್ನಿಸಲಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾಳೆ.

30. 1 ನೇ ಸಂಖ್ಯೆಯ ಆಪಾದಿತನನ್ನು ಪ್ರಾ.ಸಾ .2 ಥಳಿಸಿರಲಿಲ್ಲ ಹಾಗೂ ಪ್ರಾ.ಸಾ .2 ತನ್ನ ತಾಯಿ -2 ನೇ ಸಂಖ್ಯೆಯ ಆಪಾದಿತಳನ್ನು ಥಳಿಸುವಾಗ ಯಾರೂ ಅವಳನ್ನು ಬಿಡಿಸಲು ಪ್ರಯತ್ನಿಸಲಿಲ್ಲ ಎಂಬುದು ಪ್ರತಿವಾದಿ ಸಾಕ್ಷ್ಯ .1 ರ ಸಾಕ್ಷ್ಯದಿಂದ ಸ್ಪಷ್ಟವಾಗುತ್ತದೆ.ಅವಳ ಪ್ರಕಾರ ಪ್ರಾ.ಸಾ .2 ತನ್ನ ಕೈಯಿಂದ ಅವಳ ತಾಯಿಯನ್ನು ಥಳಿಸಿದ್ದಾನೆ.ಘಟನೆಯ ಕುರಿತು ಸಾಕ್ಷಿದಾರರು ಯಾರೂ ಮಾತನಾಡಿರುವುದಿಲ್ಲ ಹಾಗೂ ಪ್ರಾ.ಸಾ .2 ಕುಡುಗೋಲಿನಿಂದ ಗಾಯಗಳನ್ನು ಉಂಟುಮಾಡಲು ಪ್ರಯತ್ನಿಸಿರುವುದನ್ನು ಪ್ರಾ.ಸಾ .2 ರ ಸಾಕ್ಷ್ಯದಲ್ಲಿ ಸೂಚಿಸಿರುವುದಿಲ್ಲ ಎಂದು ನಾವು ಈಗಾಗಲೇ ಅಭಿಪ್ರಾಯಪಟ್ಟಿದ್ದೇವೆ.ಅಂಥ ಪರಿಸ್ಥಿತಿಯಿರುವಾಗ, 1 ನೇ ಸಂಖ್ಯೆಯ ಆಪಾದಿತ ಅಥವಾ 2 ನೇ ಸಂಖ್ಯೆಯ ಆಪಾದಿತನ ಜೀವಕ್ಕೆ ಅಪಾಯದ ಸಕಾರಣ ಭಯ ಇಲ್ಲದಿರುವುದು ಸ್ಪಷ್ಟವಾಗುತ್ತದೆ.ಪ್ರತಿವಾದಿ ಸಾಕ್ಷ ದ ಸಾಕ್ಷ್ಯವು ಸಹ 1 ನೇ ಸಂಖ್ಯೆಯ ಹಾಗೂ 2 ನೇ ಸಂಖ್ಯೆಯ ಆಪಾದಿತನ ನೆರವಿಗೆ ಬರುವುದಿಲ್ಲ.1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಜೀವಕ್ಕೆ ಅಪಾಯದ ಭಯವಿದ್ದುದು ನ್ಯಾಯಾಲಯದ ಮುಂದೆ ಇರುವ ಕೆಲವು ಸಾಕ್ಷ್ಯಾಧಾರದಲ್ಲಿದ್ದರೆ, ಆಪಾದಿತನು ಸಾಕ್ಷಿದಾರರ ಕಟಕಟೆಯನ್ನು ಆಪಾದಿತ ವ್ಯಕ್ತಿಗಳು ಪ್ರವೇಶಿಸುವ ಅಗತ್ಯತೆಯಿರಲಿಲ್ಲವೆಂಬುದನ್ನು ನಾವು ಈಗಾಗಲೇ ಸೂಚಿಸಿದ್ದೇವೆ.ಖಾಸಗಿ ಪ್ರತಿಕರಕ್ಷೆಯ ಅಧಿಕಾರವನ್ನು ಚಲಾಯಿಸುವ ಸಲುವಾಗಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಜೀವಕ್ಕೆ ಅಪಾಯವಿತ್ತು ಎಂಬ ನಿರ್ಣಯಕ್ಕೆ ಬರುವುದಕ್ಕೆ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿ ಏನೂ ಪ್ರಕಟವಾಗಿರುವುದಿಲ್ಲ.

31. ಇದಲ್ಲದೇ, ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ಹಾಗೂ ಪ್ರತಿವಾದಿ ಸಾಕ್ಷಿದಾರ 1 ರ ಸಾಕ್ಷ್ಯವನ್ನು ಅವಗಾಹನೆ ಮಾಡಿದ ಮೇಲೆ, ನಾವು, ಪ್ರತಿವಾದಿ ಸಾಕ್ಷ್ಯ ಎಲಾ 1 ತನ್ನ ತಾಯಿಯನ್ನು ಕುಡುಗೋಲಿನಿಂದ ಹಲ್ಲೆ ಮಾಡಲು ಪ್ರಾ.ಸಾ .2 ಪ್ರಯತ್ನಿಸಿದರು ಎಂದು ಹಾಗೂ ಅವನು ಕೈಗಳನ್ನು ನನ್ನ ತಾಯಿಯು ಹಿಡಿದುಕೊಂಡಳೆಂದು ಹಾಗೂ ಕುಡುಗೋಲು ನೆಲಕ್ಕೆ ಬಿದ್ದು ಹೋಗಿದ್ದು, ನನ್ನ ತಾಯಿಯು ಅದನ್ನು ಎತ್ತಿಕೊಂಡಳೆಂದು ಹಾಗೂ ತನ್ನ ತಾಯಿಯು ಪ್ರಾ.ಸಾ .2 ಥಳಿಸುತ್ತಿರುವುದನ್ನು ತಡೆಯುವ ಸಲುವಾಗಿ ಕುಡುಗೋಲಿಗೆ ಅಡ್ಡಲಾಗಿ ನನ್ನ ತಾಯಿಯೂ ಕೈ ಇಟ್ಟಳೆಂದು ಇದರ ಪರಿಣಾಮವಾಗಿ ಅವನಿಗೆ ಗಾಯಗಳಾದವೆಂದು ಪ್ರತಿವಾದಿ ಸಾಕ್ಷಿದಾರ 1 ಹೇಳಿಕೆ ನೀಡಿರುವುದನ್ನು ನಾವು ಈಗಾಗಲೇ ಗುರುತಿಸಿದ್ದೇವೆ.

32. ಈ ಸಾಕ್ಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ನ್ಯಾಯಾಲಯವು, ನಿಶಾನೆ ಪಿ .5 ಎಂದು ಗುರುತು ಹಾಕಲಾಗಿರುವ ಗಾಯ ಪ್ರಮಾಣಪತ್ರವನ್ನು ಅರಿಯಬೇಕು.ಪ್ರಾ.ಸಾ .2 ಕ್ಕೆ ಆರು ಗಾಯಗಳಾಗಿವೆಯೆಂಬುದನ್ನು ತೋರಿಸುವ ಗಾಯ ಪ್ರಮಾಣಪತ್ರದ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಇದಲ್ಲದೆ, ಬಲ ಮುಂದೋಳು ಎಂದರೆ ಬಲ ಮುಂದೋಳಿನ ಒಳೆಲಬು ಮುರಿದಿದೆ; ಬಲಗಾಲು ಎಂದರೆ ಮೊಳಕಾಲಿನ ಮೂಳೆ ಹಾಗೂ 1/ 3 ನೇ ಕೆಳ ಮೊಳಕಾಲಿನ ತೆಳುಮೂಳೆ ಮುರಿತವಾಗಿದೆ; 1/ 3 ನೇ ಎಡ ಮುಂದೋಳು ಸ್ವಲ್ಪ ಮುರಿತವಾಗಿದೆ.10 ಸೆಂ. ಮೀ X2 ಸೆಂ. ಮೀ ಅಳತೆಯ ಮುಂದೋಳಿನ ಒಳಮೂಳೆ ಕಾಣಿಸುವಂತೆ ಕಚ್ಚುಗಾಯದ ಗುರುತನ್ನು ಗಾಯಗಳು ಒಳಗೊಂಡಿವೆ; 3 ಸೆಂ. ಮೀ X 1 ಸೆಂ. ಮೀ ಅಳತೆಯಿರುವ ಕಚ್ಚಿದ ಗಾಯದ ಗುರುತು, ಮೇಲಿನ ಎಡ ಮುಂದೋಳಿನ ಒಳ ಚರ್ಮದ ಮಧ್ಯಭಾಗದಲ್ಲಿದೆ; 3 ಸೆಂ. ಮೀ X 1 ಸೆಂ. ಮೀ ಅಳತೆಯಿರುವ ಕಚ್ಚಿದ ಗಾಯ ಬಲತೊಡೆಯ ಪಾರ್ಶ್ವ ಭಾಗದಲ್ಲಿದೆ; 5 ಸೆಂ. ಮೀ X 2 ಸೆಂ. ಮೀ ಅಳತೆಯಿರುವ ಕಚ್ಚಿದ ಗಾಯದ ಗುರುತು

ಮೂಳೆ ಕಾಣುವಂತೆ 1/3 ರಷ್ಟು ಬಲ ಕಾಲಿನ ಕೆಳಭಾಗದಲ್ಲಿದೆ.ಮೂರು ಕಚ್ಚಿದ ಗಾಯಗಳು 3 ಸೆಂ. ಮೀ X 2 ಸೆಂ. ಮೀ ಅಳತೆಯಿದ್ದು, ಎಡಗಾಲಿನ 1/3 ರಷ್ಟು ಕೆಳಗಿದೆ, 1/3 ರಷ್ಟು ಮಧ್ಯದಲ್ಲಿದೆ ಹಾಗೂ 1/3 ರಷ್ಟು ಮೇಲಿದ್ದು, ಎಲುಬು ಕಾಣುವಂತಿದೆ.ನಿಶಾನೆ ಪಿ .5 ರಲ್ಲಿ, 1, 4, 5 ಹಾಗೂ 6 ಗಾಯವು ಸ್ವರೂಪದಲ್ಲಿ ತೀವ್ರತರದಲ್ಲಿವೆ ಎಂಬುದನ್ನು ತಿಳಿಸಲಾಗಿದೆ.ಪ್ರಾ.ಸಾ .8-ವೈದ್ಯರು, ಗಾಯಗಳ ಸ್ವರೂಪಕ್ಕೆ ಸಂಬಂಧಪಟ್ಟಂತೆ ಅವರ ಸಾಕ್ಷ್ಯದಲ್ಲಿ ಗಾಯ ಪ್ರಮಾಣಪತ್ರ-ನಿಶಾನೆ ಪಿ .5 ರಲ್ಲಿ ಸೂಚಿಸಿರುವಂತೆ ಪುನರುಚ್ಚರಿಸಿದ್ದಾರೆ.

33. ಪ್ರಾ.ಸಾ .8 ರ ಪಾಟೀ-ಸವಾಲಿನಲ್ಲಿ, ವ್ಯಕ್ತಿಯು ಗಟ್ಟಿಯಾದ ಮೇಲೆಯಲ್ಲಿ ಬಿದ್ದಾಗ ಆಗಿರಬಹುದಾದ 6 ನೇ ಸಂಖ್ಯೆಯ ಗಾಯಕ್ಕೆ ಸಂಬಂಧಪಟ್ಟಿರುವುದನ್ನು ಹೊರತುಪಡಿಸಿದರೆ ಬೇರೇನನ್ನೂ ಪ್ರಕಟಿಸಿರುವುದಿಲ್ಲ.ಗಟ್ಟಿಯಾದ ಮೇಲೆಯಲ್ಲಿ 3 ಬಿದ್ದಾಗ, ಆದ ನಿಶಾನೆ ಪಿ .5 ರಲ್ಲಿ ಸೂಚಿಸಿರುವ ಪ್ರಾ.ಸಾ .2 ಕ್ಕೆ ಗಾಯಗಳಾಗಿವೆಯೆಂಬುದು ಆಪಾದಿತ ವ್ಯಕ್ತಿಗಳ ವಾದವಾಗಿರುವುದಿಲ್ಲ.ಗಾಯಗಳ ಸ್ವರೂಪ ಕಚ್ಚಿದ ಗಾಯವಾಗಿದ್ದು, ಮೂಳೆ ಆಳದಲ್ಲಿವೆ.ಒಂದು ಅಥವಾ ಎರಡು ಗಾಯಗಳು ಸ್ವರೂಪದಲ್ಲಿ ತುಂಬಾ ಸಾಧಾರಣವಾಗಿದ್ದರೆ, ಆಗ ಆರೋಪಿಗಳ ವಾದದಲ್ಲಿ ಬಲವಿರುತ್ತಿತ್ತು, ಆದರೆ, ನಮ್ಮ ಮುಂದಿರುವ ಪ್ರಕರಣದಲ್ಲಿ ತೀವ್ರತಮ ಸನ್ನಿವೇಶಗಳಲ್ಲಿ ಗಾಯಗಳಾಗಿವೆ ಹಾಗೂ ಪ್ರತಿವಾದಿ ಸಾಕ್ಷ್ಯ .1 ರ ಸಾಕ್ಷ್ಯದಲ್ಲಿ ಹಾಗೂ ಸ್ಥಳದಲ್ಲಿಲ್ಲದ ಪ್ರತಿವಾದಿ ಸಾಕ್ಷ .1 ರ ಆಸಕ್ತಿಕರ ಹೇಳಿಕೆಯನ್ನು ಹೊರತುಪಡಿಸಿದರೆ, ಪ್ರಾ.ಸಾ .2, ಕುಡುಗೋಲಿನಿಂದ 2 ನೇ ಸಂಖ್ಯೆಯ ಆಪಾದಿತನನ್ನು ಥಳಿಸಲು ಪ್ರಯತ್ನಿಸಿರುವುದು ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿಯೂ ಕೂಡ ಏನನ್ನೂ ಸೂಚಿಸಿಲ್ಲ.ಪ್ರಾ.ಸಾ .2 ಹಾಗೂ ಅವಳ ತಾಯಿ ಇಬ್ಬರೂ ನೆಲಕ್ಕೆ ಬಿದ್ದಾಗ, ಅವಳು ಮನೆಯಿಂದ ಓಡಿಹೋಗಿದ್ದಾಳೆ ಹಾಗೂ ಅವಳು ಘಟನೆಗೆ ಸಾಕ್ಷಿಯಾಗಿಲ್ಲ ಎಂಬುದು ಪ್ರತಿವಾದಿ ಸಾಕ್ಷ್ಯ .1 ರಿಂದ ಸ್ಪಷ್ಟವಾಗುತ್ತದೆ.ಅವಳು ಹಿಂದಿರುಗಿ ಬಂದಾಗ, ಪ್ರಾ.ಸಾ .2 ನೆಲದ ಮೇಲೆ ಬಿದ್ದಿರುವುದನ್ನು ಕಂಡಿದ್ದಾಳೆ, ಇದು ಅವಳ ಸಾಕ್ಷ್ಯದಲ್ಲಿನ ಸುಧಾರಣೆಯಲ್ಲದೆ ಮತ್ತೇನೂ ಅಲ್ಲ ಎಂಬುದನ್ನು ಅವಳು ಸ್ಪಷ್ಟವಾಗಿ ತಿಳಿಸಿದ್ದಾಳೆ.

34. ಪ್ರಾ.ಸಾ .2 ರ ಸಾಕ್ಷ್ಯ ಎಲಾ ಹಾಗೂ ವೈದ್ಯ-ಪ್ರಾ.ಸಾ .8 ರ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡು, ಪ್ರಾ.ಸಾ .2 ಕ್ಕೆ ಆದ ಗಾಯಗಳ ಸ್ವರೂಪವನ್ನು ಪರಿಗಣಿಸಿ ನಾವು ಈಗಾಗಲೇ ಗುರುತಿಸಲಾದಂತೆ, 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರಿಗೆ ಯಾವುದೇ ಗಾಯಗಳಾಗದಿರುವುದರಿಂದ ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸುವುದನ್ನು ಸಮರ್ಥಿಸುವ ಯಾವುದೇ ಸನ್ನಿವೇಶ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.ಆಪಾದಿತನು, ತನಗೆ ಪ್ರಾ.ಸಾ .2 ಕುಡುಗೋಲಿನಿಂದ ಥಳಿಸಲು ಪ್ರಯತ್ನಿಸಿದನೆಂಬುದನ್ನು ತೋರಿಸುವ ಹಾಗೂ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ಜೀವಕ್ಕೆ ಅಪಾಯದ ಭಯವಿತ್ತೆಂಬುದನ್ನು ತೋರಿಸುವ ಯಾವುದೇ ಸಾಕ್ಷ್ಯವನ್ನು ಸಹ ಆಪಾದಿತನು ಮಂಡಿಸಿಲ್ಲ.ಹೀಗಾಗಿ, ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು ಭಾರತ ದಂಡ ಸಂಹಿತೆಯ 99 ನೇ ಪ್ರಕರಣದ ಮೇರೆಗೆ ನಿರ್ಬಂಧಗಳಿವೆಯೆಂದು ನಾವು ಅಭಿಪ್ರಾಯಪಡುತ್ತೇವೆ.ಆಪಾದಿತ ವ್ಯಕ್ತಿಗಳ ಜೀವಗಳಿಗೆ ಅಪಾಯದ ಸಕಾರಣ ಭಯವಿತ್ತೆಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವಾಗ, ಕೇವಲ ಖಾಸಗಿ ಪ್ರತಿರಕ್ಷೆಯ ವಾದವನ್ನು ತೆಗೆದುಕೊಳ್ಳುವುದು ಸಾಕಾಗುವುದಿಲ್ಲ.ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸುವ ಅಗತ್ಯತೆಯಿತ್ತು ಎಂಬ ಸನ್ನಿವೇಶವನ್ನು ಹೊರಗೆಡಹಬೇಕು ಹಾಗೂ ಖಾಸಗಿ ಪ್ರತಿರಕ್ಷೆಗೆ ಸಂಬಂಧಪಟ್ಟಂತೆ ನಿರ್ದಿಷ್ಟ ಪ್ರತಿರಕ್ಷೆಯನ್ನು ಅವರು ತೆಗೆದುಕೊಂಡಿದ್ದಾಗ ಆಪಾದಿತನು ಅದನ್ನು ರುಜುವಾತುಪಡಿಸಿರಬೇಕಾಗುತ್ತದೆ.

35. ಅಧಿವಿಚಾರಣಾ ನ್ಯಾಯಾಲಯವು, ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯವನ್ನು ಹಾಗೂ ಪ್ರತಿವಾದಿ ಸಾಕ್ಷಿದಾರ 1 ರ ಸಾಕ್ಷ್ಯವನ್ನು ಅಳೆಯುತ್ತಿರುವಾಗ ಅದರಲ್ಲಿ ಉತ ತಗೊಳಿಸಲಾದ ತೀರ್ಪುಗಳಲ್ಲಿ ಹೇಳಲಾದ ತತ್ವಗಳನ್ನು ಗಮನದಲ್ಲಿಟ್ಟುಕೊಂಡು, ಖಾಸಗಿ ಪ್ರತಿರಕ್ಷೆಯ ಅಧಿಕಾರವನ್ನು ಚಲಾಯಿಸಲು ಭಾರತ ದಂಡ ಸಂಹಿತೆಯ 97 ಹಾಗೂ 99 ನೇ ಪ್ರಕರಣಗಳು ಕೆಲವು ನಿರ್ಬಂಧಗಳನ್ನು ಉಪಬಂಧಿಸಿವೆಯೆಂದು ಸರಿಯಾದ ನಿರ್ಣಯಕ್ಕೆ ಬರಬೇಕಾಗುತ್ತದೆ.ಅಧಿವಿಚಾರಣಾ ನ್ಯಾಯಾಲಯವು, ಯುಕ್ತ ದೃಷ್ಟಿಕೋನದಲ್ಲಿ ಸಾಕ್ಷ್ಯವನ್ನು ಪುನರ್ವಿವೇಚಿಸಿರುವುದಿಲ್ಲ.ಘಟನೆ ನಡೆದಿರುವುದಕ್ಕೆ ಸಂಬಂಧಿಸಿದಂತೆ ಹಾಗೂ ಪ್ರಾ.ಸಾ. ಕ್ಕೆ ಗಾಯವಾಗಿದೆಯೆಂಬುದರ ಬಗ್ಗೆ ಯಾವುದೇ ವಿವಾದವಿರುವುದಿಲ್ಲ.ಅಪೀಲು ನ್ಯಾಯಾಲಯವು, ನಿಶಾನೆ ಪಿ .5 ರಲ್ಲಿ ಸೂಚಿಸಲಾಗಿರುವ ಪ್ರಾ.ಸಾ .2 ಕ್ಕೆ ಆಗಿರುವ ಗಾಯಗಳ ಸ್ವರೂಪವನ್ನು ಚರ್ಚಿಸಿಲ್ಲ.ಗಾಯ ಪ್ರಮಾಣಪತ್ರ-ನಿಶಾನೆ ಪಿ .5 ರ ಅವಗಾಹನೆಯು, ಗಾಯಗಳು ಮೂಳೆ ಆಳದ ಗಾಯಗಳಾಗಿವೆಯೆಂಬುದನ್ನು ಪ್ರಕಟಪಡಿಸಿದೆ.2 ನೇ ಸಂಖ್ಯೆಯ ಆಪಾದಿತನನ್ನು ಪ್ರಾ.ಸಾ .2 ಕೈಗಳಿಂದ ಥಳಿಸಿದಾಗ, ಥಳಿಸುವುದನ್ನು ತಡೆಯುವ ಸಲುವಾಗಿ, ಅವಳು ಕುಡುಗೋಲನ್ನು ಇಟ್ಟಳೆಂದು ಇದರ ಪರಿಣಾಮವಾಗಿ ಪ್ರಾ.ಸಾ .2 ಕ್ಕೆ ಗಾಯಗಳಾದವು ಎಂಬುದು ಆಪಾದಿತಳ ಪ್ರತಿವಾದವಾಗಿದೆ.ಪ್ರಸ್ತುತ ಸಾಕ್ಷ್ಯವನ್ನು, ಗಾಯಗಳ ಸ್ವರೂಪದ ಕಾರಣದಿಂದ ಲೆಕ್ಕಕ್ಕೆ ತೆಗೆದುಕೊಳ್ಳುವುದನ್ನು ಒಪ್ಪಲು ಸಾಧ್ಯವಿಲ್ಲ ಹಾಗೂ ಮಾನ್ಯ II ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಸಾಕ್ಷ್ಯವನ್ನು ಮರುವಿವೇಚಿಸುವಾಗ, ವೈದ್ಯಕೀಯ ಸಾಕ್ಷ್ಯವನ್ನು ಅದರಲ್ಲೂ ವಿಶೇಷವಾಗಿ ನಿಶಾನೆ ಪಿ .5-ಗಾಯ ಪ್ರಮಾಣಪತ್ರವನ್ನು ಹಾಗೂ ಪ್ರಾ.ಸಾ .8-ವೈದ್ಯರ ಸಾಕ್ಷ್ಯವನ್ನು ಪರಿಗಣಿಸಿಲ್ಲ.

36. ಪ್ರಾ.ಸಾ .8 ತನ್ನ ಸಾಕ್ಷ್ಯದಲ್ಲಿ ಇತರ ಗಾಯಗಳಲ್ಲದ, ಪ್ರಮುಖವಾಗಿ 6 ನೇ ಸಂಖ್ಯೆಯ ಗಾಯವು, ವ್ಯಕ್ತಿಯು ಗಟ್ಟಿಯಾದ ಹೊರ ಮೇಲೆ ಮೇಲೆ ಬಿದ್ದಿದ್ದರೆ ಆಗಿರುತ್ತಿತೇ ಎಂಬುದನ್ನು ತಿಳಿಸಿದ್ದಾರೆ.ಇದನ್ನು ಅಪೀಲು ನ್ಯಾಯಾಲಯವು ಮರುವಿವೇಚಿಸಿಲ್ಲ.ಪ್ರಾ.ಸಾ .2 ರ ಸಾಕ್ಷ್ಯವನ್ನು, ದಾಖಲೆಯಲ್ಲಿರುವ ವೈದ್ಯಕೀಯ ಸಾಕ್ಷ್ಯವನ್ನು ಪರಿಗಣಿಸುವಲ್ಲಿ ವಿಫಲವಾಗಿದ್ದು, ದೋಷಯುಕ್ತವಾಗಿ ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸಿದೆ.ಪ್ರಾ.ಸಾ .1 ಹಾಗೂ 3 ರ ಸಾಕ್ಷ್ಯದಲ್ಲಿ ಕೆಲವು ವ್ಯತ್ಯಾಸಗಳಿದ್ದು, ಇದರಲ್ಲಿ ಅವರು, 1 ನೇ ಆಪಾದಿತನ ಮನೆಗೆ ಹೋದಾಗ, ಅವರು 1 ಹಾಗೂ 2 ನೇ ಸಂಖ್ಯೆಯ ಆಪಾದಿತರನ್ನು ನೋಡಿದ್ದು, ಪ್ರಾ.ಸಾ .2 ನ್ನು ಥಳಿಸುತ್ತಿದ್ದರೆಂದು ತಿಳಿಸಿದ್ದಾರೆ ಹಾಗೂ ಪ್ರಾ.ಸಾ .2 ನ್ನು ರಕ್ಷಿಸಲಿಲ್ಲವೆಂದು ತಿಳಿಸಿದ್ದಾರೆ.ಪ್ರಾ.ಸಾ .1 ಹಾಗೂ 3 ರ ಸಾಕ್ಷ್ಯದಲ್ಲಿ ವ್ಯತ್ಯಾಸಗಳಿವೆ.ಆದರೆ, ಅದನ್ನು ಪ್ರಾಸಿಕ್ಯೂಷನ್ನ ಸಂಪೂರ್ಣ ವಾದವನ್ನು ತೆಗೆದುಕೊಳ್ಳುವುದಿಲ್ಲ ಹಾಗೂ ಪ್ರಾ.ಸಾ .1 ಹಾಗೂ 3 ರ ಸಾಕ್ಷ್ಯದಲ್ಲಿ ಅಂಥ ಸಣ್ಣ ವ್ಯತ್ಯಾಸಗಳನ್ನು ಹೊರತುಪಡಿಸಿದರೆ, ಪ್ರಾ.ಸಾ .2 ರ ಸಾಕ್ಷ್ಯ ಎಂ ಹಾಗೂ ದಾಖಲೆಯಲ್ಲಿರುವ ವೈದ್ಯಕೀಯ ಸಾಕ್ಷ್ಯವು, ಪ್ರಾಸಿಕ್ಯೂಷನ್ನ ವಾದವನ್ನು ಸಮರ್ಥಿಸುತ್ತವೆ.ಹೀಗಾಗಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತನ ವಾದದಲ್ಲಿ ಬಲವಿದೆಯೆಂದು ಹಾಗೂ ಸನ್ನಿವೇಶವು ಖಾಸಗಿ ಪ್ರತಿರಕ್ಷೆಯನ್ನು ಚಲಾಯಿಸುವ ಅಧಿಕಾರವನ್ನು ನೀಡುತ್ತದೆಯೆಂಬ ನಿರ್ಣಯಕ್ಕೆ ಬರುವ ಮೂಲಕ ಆಪಾದಿತ ವ್ಯಕ್ತಿಗಳನ್ನು ಖುಲಾಸೆಗೊಳಿಸುವಲ್ಲಿ ಅಪೀಲು ನ್ಯಾಯಾಲಯದ ನಿರ್ಣಯವು ಸಮರ್ಥನೀಯವಾಗಿರುವುದಿಲ್ಲ.ಅಪೀಲು ನ್ಯಾಯಾಲಯವು ಭಾರತ ದಂಡ ಸಂಹಿತೆಯ 97 ಹಾಗೂ 99 ನೇ ಪ್ರಕರಣಗಳ ಹಾಗೂ ಖಾಸಗಿ ಪ್ರತಿರಕ್ಷೆಯ ಇತರ ಪರಂತುಕದ ಒಳಾಂಶಗಳನ್ನು ವಿವೇಚಿಸಿರಲಿಲ್ಲ.ಹೀಗಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ತಳ್ಳಿಹಾಕಬೇಕಾಗುತ್ತದೆ ಹಾಗೂ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು, ಅಪರಾಧ ನಿರ್ಣಯದ ಸಂಬಂಧದಲ್ಲಿ ಪುನಸ್ಥಾಪಿಸಬೇಕಾಗುತ್ತದೆ.

37. ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನನ್ನು ಶಿಕ್ಷಿಸುವಾಗ, ಗಾಯಗೊಂಡವರಿಗೆ ಆದ ಗಾಯಗಳನ್ನು ಗಮನಕ್ಕೆ ತೆಗೆದುಕೊಂಡಿದೆ ಹಾಗೂ ಎರಡು ವರ್ಷಗಳ ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದು 1,000/ ರೂ.ಗಳ ಜುಲ್ಮಾನೆಯನ್ನು ವಿಧಿಸಿದೆ.ಶಿಕ್ಷೆಯನ್ನು ಗಮನಕ್ಕೆ ತೆಗೆದುಕೊಂಡು, ಎರಡು ವರ್ಷಗಳ ಶಿಕ್ಷೆಯನ್ನು ವಿಧಿಸಿದ್ದರೂ ಕೂಡ ಅಧಿವಿಚಾರಣಾ ನ್ಯಾಯಾಲಯವು, ಜುಲ್ಮಾನೆಯನ್ನು ಹಾಗೂ ನಷ್ಟಪರಿಹಾರವನ್ನು ವಿಧಿಸುವಾಗ ಐದು ಉಪ-ಪ್ರಕರಣಗಳಿರುವ ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳ ಉಪಬಂಧಗಳನ್ನು ಗಮನಕ್ಕೆ ತೆಗೆದುಕೊಳ್ಳಲು ವಿಫಲವಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ( 1) ನೇ ಉಪ-ಪ್ರಕರಣವು ನ್ಯಾಯಾಲಯವು, ಜುಲ್ಮಾನೆಯನ್ನು ವಿಧಿಸುವುದನ್ನು ಸಮರ್ಥಿಸುತ್ತದೆ ಹಾಗೂ ಹಾಗೆ ವಿಧಿಸಲಾದ ಜುಲ್ಮಾನೆಯಲ್ಲಿ ಅದರ ಭಾಗವನ್ನು ಸಂತ್ರಸ್ತರಿಗೆ ಸಂದಾಯಮಾಡಬೇಕಾದ ನಷ್ಟಪರಿಹಾರವೆಂದು ನೀಡಬಹುದಾಗಿದೆ.ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ( 3) ನೇ ಉಪ-ಪ್ರಕರಣವನ್ನು ಹೀಗೆ ಓದಲಾಗಿದೆ:

* ( 3) ಜುಲ್ಮಾನೆಯು ಒಂದು ಭಾಗವಾಗಿರದ ದಂಡಾದೇಶವನ್ನು ನ್ಯಾಯಾಲಯವು ವಿಧಿಸಿದರೆ, ಆ ನ್ಯಾಯಾಲಯವು, ತೀರ್ಪ ಕೊಡುವಾಗ, ಯಾವುದಕ್ಕಾಗಿ ಆಪಾದಿತ ವ್ಯಕ್ತಿಯು ಹಾಗೆ ದಂಡಾದೇಶಿತನಾಗಿದ್ದಾನೋ ಆ ಕೃತ್ಯದ ಕಾರಣದಿಂದಾಗಿ ಯಾವುದೇ ನಷ್ಟ ಅಥವಾ ಕ್ಷತಿಯನ್ನು ಅನುಭವಿಸಿದ ವ್ಯಕ್ತಿಗೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ಪರಿಹಾರದ ರೂಪದಲ್ಲಿ ಸಂದಾಯ ಮಾಡಲು ಆಪಾದಿತ ವ್ಯಕ್ತಿಗೆ ಆದೇಶಿಸಬಹುದು.

ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕಣದ ಎಲ್ಲಾ ಉಪಬಂಧಗಳನ್ನು ಸ್ಪಷ್ಟವಾಗಿ ಓದಿದ ನಂತರ, ದಂಡಾದೇಶವಾಗಿ ಜುಲ್ಮಾನೆಯನ್ನು ವಿಧಿಸಿದಾಗ ನ್ಯಾಯಾಲಯವು ಪರಿಹಾರವನ್ನು ನೀಡಲು ಅಧಿಕಾರಸ್ಥವಾಗಿರುವುದು ಸ್ಪಷ್ಟವಾಗುತ್ತದೆ.2009 ರ 5 ನೇ ಅಧಿನಿಯಮದ ಕಾರಣದಿಂದ 31.12.2009 ರಿಂದ ಜಾರಿಗೆ ಬಂದಿರುವ ದಂಡ ಪ್ರಕ್ರಿಯಾ ಸಂಹಿತೆಯ 357 ಎ ಪ್ರಕರಣದ ಉಪಬಂಧಗಳು ಪ್ರಕರಣಗಳು ಖುಲಾಸೆಯಲ್ಲಿ ಮುಕ್ತಾಯಗೊಂಡಿದ್ದರೂ ಅಥವಾ ರದ್ದುಗೊಂಡಿದ್ದರೂ ಸಹ ಪರಿಹಾರವನ್ನು ನೀಡಲು ನ್ಯಾಯಾಲಯವನ್ನು ಅಧಿಕಾರಸ್ಥಗೊಳಿಸಿವೆ. ಪ್ರಕರಣವು ಆರು ಉಪ-ಪ್ರಕರಣಗಳನ್ನು ಒಳಗೊಂಡಿದ್ದು, ಅದನ್ನು ಮರು ಹಾಜರುಪಡಿಸುವುದು ನ್ಯಾಯಯುತ ಹಾಗೂ ಪ್ರಸಕ್ತವಾಗಿದೆ:

357 ಎ. ಬಾಧಿತನಿಗೆ ಪರಿಹಾರ ಯೋಜನೆ.

(1) ಅಪರಾಧದ ಪರಿಣಾಮದಿಂದಾಗಿ ಹಾನಿಗೊಳಗಾದ ಅಥವಾ ಕ್ಷತಿಗೊಂಡ ಮತ್ತು ಪುನರ್ವಸತಿ ಅಗತ್ಯವಾಗಿರುವ ಬಾಧಿತ ವ್ಯಕ್ತಿಗೆ ಅಥವಾ ಆತನ ಅವಲಂಬಿತರಿಗೆ ಪರಿಹಾರ ನೀಡುವ ಉದ್ದೇಶಕ್ಕಾಗಿ ಪ್ರತಿಯೊಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಮನ್ವಯದೊಂದಿಗೆ ಯೋಜನೆಯನ್ನು ರೂಪಿಸತಕ್ಕದ್ದು.

(2) ಪರಿಹಾರಕ್ಕಾಗಿ ನ್ಯಾಯಾಲಯವು ಶಿಫಾರಸ್ಸನ್ನು ಮಾಡಿದಾಗಲೆಲ್ಲ ಸಂದರ್ಭಾನುಸಾರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಅಥವಾ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ( 1) ನೇ ಉಪ-ಪ್ರಕರಣದಲ್ಲಿ ಹೇಳಿರುವ ಯೋಜನೆಯ ಮೇರೆಗೆ ಸಂದಾಯ ಮಾಡಬಹುದಾದ ಪರಿಹಾರ ಧನದ ಪ್ರಮಾಣವನ್ನು ನಿರ್ಧರಿಸತಕ್ಕದ್ದು.

( 3) ಅಧಿವಿಚಾರಣೆಯ ಮುಕ್ತಾಯದ ನಂತರ ಅಧಿವಿಚಾರಣಾ ನ್ಯಾಯಾಲಯವು, 357 ನೇ ಪ್ರಕರಣದ ಮೇರೆಗೆ ಮಂಜೂರು ಮಾಡದ ಪರಿಹಾರ ಧನವು, ಅಂಥ ಪುನರ್ವಸತಿಗೆ ಸಾಕಷ್ಟಾದುದಾಗಿಲ್ಲ ಎಂದು ಮನದಟ್ಟಾದರೆ, ಅಥವಾ ಮೊಕದ್ದಮೆಯಲ್ಲಿ ನಿರ್ದೋಷಿಗಳೆಂದು ನಿರ್ಣಯವಾದರೆ ಅಥವಾ ಬಿಡುಗಡೆ ಮಾಡಿದ್ದರೆ ಮತ್ತು ಬಾಧಿತನಿಗೆ ಪುನರ್ವಸತಿ ಕಲ್ಪಿಸಬೇಕಾಗಿದ್ದರೆ, ಅದು ಪರಿಹಾರ ಧನಕ್ಕಾಗಿ ಶಿಫಾರಸ್ಸು ಮಾಡಬಹುದು.

( 4) ಅಪರಾಧಿಯು ಪತ್ತೆ ಆಗದಿದ್ದರೆ ಅಥವಾ ಆತನನ್ನು ಗುರುತು ಹಿಡಿಯಲಾಗದಿದ್ದರೆ, ಆದರೆ, ಬಾಧಿತನನ್ನು ಗುರುತಿಸಿದ್ದು ಅಧಿವಿಚಾರಣೆ ನಡೆಯದಿದ್ದರೆ ಬಾಧಿತನು ಅಥವಾ ಆತನ ಅವಲಂಬಿತರು ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಪರಿಹಾರ ಧನ ಮಂಜೂರು ಮಾಡಲು ಕೇಳಿ ಅರ್ಜಿಯನ್ನು ಸಲ್ಲಿಸಬಹುದು.

( 5) ಅಂಥ ಶಿಫಾರಸ್ಸುಗಳನ್ನು ಅಥವಾ ( 4) ನೇ ಉಪ ಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ನಂತರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಅಥವಾ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಸೂಕ್ತ ವಿಚಾರಣೆ ನಡೆಸಿ ಎರಡು ತಿಂಗಳೊಳಗಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಸಾಕಷ್ಟು ಪರಿಹಾರ ಧನವನ್ನು ಮಂಜೂರು ಮಾಡತಕ್ಕದ್ದು.

(6) ರಾಜ್ಯವು ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ಸ ಂ ದರ್ಭಾನುಸಾರ, ಬಾಧಿತನ ಸ ಂ ಕಷ್ಟವನ್ನು ಶಮನಗೊಳಿಸಲು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪೊಲೀಸ್ ಅಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯ ವನಲ್ಲದ ಪೊಲೀಸ್ ಅಧಿಕಾರಿಯು ಅಥವಾ ಆಯಾ ಪ್ರದೇಶದ ಮ್ಯಾಜಿಸ್ಟ್ರೇಟರು ಕೊಟ್ಟ ಪ್ರಮಾಣಪತ್ರದ ಆಧಾರದ ಮೇಲೆ ಉಚಿತವಾಗಿ ತುರ್ತು ಪ್ರಥಮ ಚಿಕಿತ್ಸೆ ಸೌಕರ್ಯವನ್ನು ವೈದ್ಯಕೀಯ ಪ್ರಯೋಜನಗಳನ್ನು ಕೊಡುವಂತೆ ಆದೇಶ ಮಾಡಬಹುದು ಅಥವಾ ಸಮುಚಿತವೆಂದು ಸಮುಚಿತ ಪ್ರಾಧಿಕಾರವು ಭಾವಿಸುವಂಥ ಇತರ ಮಧ್ಯಂತರ ಪರಿಹಾರಕ್ಕೆ ಆದೇಶ ಮಾಡಬಹುದು.

38. ನಾವು ಸಂತ್ರಸ್ತ ಪರಿಹಾರ ಕುರಿತ ದಿನಾಂಕ 22.02.2012 ರ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಸಹ ಉಲ್ಲೇಖಿಸಬಯಸುತ್ತೇವೆ.ಅಪರಾಧದ ಕಾರಣದಿಂದ ನಷ್ಟಕ್ಕೆ ಒಳಗಾಗಿರುವ ಹಾಗೂ ಪುನರ್ವ್ಯವಸ್ಥೆ ಅಗತ್ಯವಾಗಿರುವ ಸಂತ್ರಸ್ತರಿಗೆ ಅಥವಾ ಅವರ ಅವಲಂಬಿತರಿಗೆ ಪರಿಹಾರ ನೀಡುವ ಉದ್ದೇಶಕ್ಕಾಗಿ ನಿಧಿಗಳನ್ನು ಒದಗಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗಿನ ಸಹಕಾರದಲ್ಲಿ ಯೋಜನೆಯನ್ನು ಸಿದ್ದಪಡಿಸುವುದನ್ನು ದಂಡ ಪ್ರಕ್ರಿಯಾ ಸಂಹಿತೆಯ 3570 ಪ್ರಕರಣದ ತಿದ್ದುಪಡಿಯ ಪರಿಭಾಷೆಯಲ್ಲಿ ಕಡ್ಡಾಯಗೊಳಿಸಿದೆ ಹಾಗೂ ದಿನಾಂಕ 22.02.2012 ರ ಈ ಅಧಿಸೂಚನೆಯನ್ನು, ಸಂತ್ರಸ್ತರಿಗೆ ಪರಿಹಾರ ನೀಡುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

39. ಅಂಕುಶ್ ಶಿವಾಜಿ ಗಾಯಕ್ವಾಡ್ -ವಿರುದ್ದ-ಮಹಾರಾಷ್ಟ್ರ ರಾಜ್ಯ 3 ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಪರಿಹಾರ ಸಂದಾಯ ಮಾಡುವುದಕ್ಕೆ ಸಂಬಂಧಿಸಿದ ಸಂಪೂರ್ಣ ತೀರ್ಪುಜನ್ಯ ಕಾನೂನನ್ನು ಪುನರ್ಪರಿಶೀಲಿಸಿದ್ದು, ಸಂಬಂಧಪಟ್ಟ ಚರ್ಚೆಯು ಪುಟ-785-791 ಹಾಗೂ 797 ರಲ್ಲಿ ಕಂಡುಬರುತ್ತದೆ.ಸದರಿ ಪ್ರಕರಣದಲ್ಲಿ ಕಂಡಿಕೆ -33 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಚ ಮುಂದಿನಂತೆ ಅಭಿಪ್ರಾಯಪಟ್ಟಿದೆ.

"33. ಈ ನ್ಯಾಯಾಲಯದ ನ್ಯಾಯಿಕ ಉಚ್ಚರಣೆಗಳ ಉದ್ದವಾದ ಸಾಲನ್ನು ಸುಸ್ಪಷ್ಟವಾಗಿ ಗುರುತಿಸಿದ್ದು ಅದು ಅವರು ಅನುಭವಿಸಿದ ನಷ್ಟ ಅಥವಾ ಕೃತಿಗಾಗಿ, ಪರಿಹಾರಕ್ಕೆ, ನಷ್ಟ ತುಂಬಿಕೊಡುವುದಕ್ಕೆ ಅಥವ ನಷ್ಟಭರ್ತಿಗೆ ಹಕ್ಕುಳ್ಳವರಾಗಿರುವ ಅಪರಾಧಗಳ ಸಂತ್ರಸ್ತರಿಗೆ ಸಂಬಂಧಪಟ್ಟ ಪ್ರಸ್ತಾವದಲ್ಲಿನ ನಿದರ್ಶನ ಅದಲು ಬದಲಾಗುತ್ತದೆ.ಪ್ರತಿಫಲ ರೂಪದಿಂದ ನಷ್ಟ ತುಂಬುವಿಕೆಗೆ ಆದ ಬದಲಾವಣೆಯು ಮಧ್ಯಕಾಲೀನ 1960 ರಲ್ಲಿ ಪ್ರಾರಂಭಗೊಂಡು ಅದನ್ನು ಅನುಸರಿಸಿ ದಶಕಗಳಲ್ಲಿ ವೇಗವನ್ನು ಪಡೆದುಕೊಂಡಿತು.ಆಸಕ್ತಿಕರವಾಗಿ, ಪ್ರಾಚೀನ ಕಾಲದಲ್ಲಿ ಯಾವ ರೀತಿಯಿತ್ತೊ ಅಷ್ಟು ಪ್ರಮಾಣಕ್ಕೆ ಕಾನೂನು ರೂಪಣಕಾರರು ಹಾಗೂ ನ್ಯಾಯಾಲಯಗಳು ಗಡಿಯಾರವನ್ನು ಸಂಪೂರ್ಣವಾಗಿ ಹಿಂದಕ್ಕೆ ತ ಂ ದ ಂ ತೆ ಕಂಡುಬಂದಿದೆ.ಹಾರ್ವರ್ಡ್‌ರ ಕಾನೂನು ಪುನರ್ಪರಿಶೀಲನೆ (1984), -ಕ್ರಿಮಿನಲ್ ಕಾನೂನು ಪ್ರಕ್ರಿಯೆಯಲ್ಲಿ ಸಂತ್ರಸ್ತರಿಗೆ ನಷ್ಟತುಂಬಿಕೊಡುವಿಕೆ:ಕಾರ್ಯವಿಧಾನ ವಿಶ್ಲೇಷಣೆ ' ಲೇಖನದಲ್ಲಿ, ಈ ಮುಂದಿನ ಪದಗಳಲ್ಲಿ ಪ್ರತಿಫಲ ಪರಿಭಾಷೆಯ ಐತಿಹಾಸಿಕ ದೃಷ್ಟಿಯನ್ನು ಸಂಕ್ಷಿಪ್ತಗೊಳಿಸಿದೆ:

" ಶಿಕ್ಷೆಯ ಹೊಸ ವಿಧಾನದಿಂದ ದೂರವಿರುವುದರಿಂದ, ಇತಿಹಾಸದುದ್ದಕ್ಕೂ, ನಷ್ಟ ಪರಿಹಾರವನ್ನು ಪ್ರತೀಕಾರ ಮಂಜೂರಾತಿಯಂತೆ ಬಳಸಲಾಗಿದೆ.ಪ್ರಾಚೀನ ಸಂಘಗಳಲ್ಲಿ, ಸಿವಿಲ್ ಹಾಗೂ ಕ್ರಿಮಿನಲ್ ಕಾನೂನಿನ ಪರಿಕಲ್ಪನೆಯನ್ನು ಪ್ರತ್ಯೇಕಗೊಳಿಸುವ ಮೊದಲು, ಅಪರಾಧವು ಉಂಟುಮಾಡಿದ ಯಾವುದೇ ನಷ್ಟಕ್ಕೆ, ಸಂತ್ರಸ್ತ ಅಥವಾ ಅವನ ಕುಟುಂಬಕ್ಕೆ ನಷ್ಟವನ್ನು ತುಂಬಿಕೊಡಲು ತಪ್ಪಿತಸ್ಥನನ್ನು ಅಗತ್ಯಪಡಿಸುವುದು ಪ್ರಮಾಣಿಕ ಪದ್ಧತಿಯಾಗಿತ್ತು.ಅಂಥ ನಷ್ಟ ತುಂಬಿಕೊಡುವ ಪ್ರಾಥಮಿಕ ಉದ್ದೇಶ ಸಂತ್ರಸ್ತರಿಗೆ ಪರಿಹಾರ ನೀಡುವಂಥದಾಗಿರಲಿಲ್ಲ ಆದರೆ ಅಪರಾಧಿಯನ್ನು ಸಂತ್ರಸ್ತ ಅಥವಾ ಸಮುದಾಯದ ಹಿಂಸಾಪ್ರತೀಕಾರದಿಂದ ರಕ್ಷಿಸುವುದಾಗಿತ್ತು.ಇದೊಂದು ಸಾಧನವಾಗಿದ್ದು, ಇದರ ಮೂಲಕ ಅಪರಾಧಿಯು ಅವನು ಕಳೆದುಕೊಂಡಿದ್ದ ಶಾಂತಿಯನ್ನು ಹಿ ಂ ದಕ್ಕೆ ಪಡೆಯುವುದಾಗಿತ್ತು.ರಾಜ್ಯವು ಹಂತಹಂತವಾಗಿ, ಶಿಕ್ಷೆಯ ಪದ್ಧತಿಯಲ್ಲಿ ಪೂರ್ಣಾಧಿಕಾರವನ್ನು ಸ್ಥಾಪಿಸಿತು ಹಾಗೂ ಸಿವಿಲ್ ಹಾಗೂ ಕ್ರಿಮಿನಲ್ ಕಾನೂನುಗಳು ವರ್ಗೀಕರಣಗೊಂಡು, ಸಂತ್ರಸ್ತರ ಪರಿಹಾರ ಹಕ್ಕನ್ನು ಸಿವಿಲ್ ಕಾನೂನಿನೊಳಗೆ ಸಂಯೋಜಿಸಲಾಗಿತ್ತು.

40. ಅಧಿವಿಚಾರಣಾ ನ್ಯಾಯಾಲಯಗಳು, ಶಿಕ್ಷೆಯನ್ನು ವಿಧಿಸುವಾಗ ಅಪರಾಧಗಳ ತೀವ್ರತೆಯನ್ನು, ಸಂತ್ರಸ್ತರಿಗೆ ಆದ ಗಾಯಗಳ ಸ್ವರೂಪವನ್ನು ಹಾಗೂ ಚಿಕಿತ್ಸೆಗೆ ಆದ ಮೊತ್ತವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲವೆಂಬುದನ್ನು ಈ ನ್ಯಾಯಾಲಯವು ಗಮನಿಸಿದೆ.ನ್ಯಾಯಾಲಯಗಳು, ಆಪಾದಿತನನ್ನು ಶಿಕ್ಷಿಸುವಾಗ ಸದರಿ ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಹಾಗೂ ಏಕರೂಪವಾಗಿ, ಅಧಿವಿಚಾರಣಾ ನ್ಯಾಯಾಲಯಗಳು, ಆಪಾದಿತ ವ್ಯಕ್ತಿಗಳಿಗೆ ಶಿಕ್ಷೆಯನ್ನು ನೀಡುವಾಗ ತಮ್ಮ ವಿವೇಚನೆಯನ್ನು ಯುಕ್ತ ರೀತಿಯಲ್ಲಿ ಅನ್ವಯಿಸಿರುವುದಿಲ್ಲ.

41. ಅಪರಾಧದ ಸಂತ್ರಸ್ತರಿಗೆ ಪರಿಹಾರ ನೀಡುವ ಸಂಬಂಧ ರಾಜ್ಯ ಸರ್ಕಾರವು ಯೋಜನೆಗಳನ್ನು ರೂಪಿಸುವ ರಾಜ್ಯ ಸರ್ಕಾರಗಳ ಜವಾಬ್ದಾರಿಯನ್ನು ಹೊಸದಾಗಿ ಆರಂಭಿಸಿದ 357 ಎ ಪ್ರಕರಣ ನೀಡಿದ್ದು, ರಾಜ್ಯ ಸರ್ಕಾರವು ದಿನಾಂಕ 22.02.2012 ರ ಅಧಿಸೂಚನೆಯನ್ನು ಹೊರಡಿಸಿದೆಯೆಂಬುದನ್ನು ಗಮನಿಸಬೇಕಾಗುತ್ತದೆ.357 ಎ ಹೊಸ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ಪ್ರಕರಣದಲ್ಲಿನ ಪರಿಹಾರದ ಪ್ರಮಾಣವನ್ನು ನಿರ್ಧರಿಸುವ ಜವಾಬ್ದಾರಿಯು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೇಲೆ ಅಥವಾ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಮೇಲಿರುತ್ತದೆ.

42. ಸುರೇಶ್ -ವಿರುದ್ಧ ಹರಿಯಾಣ ರಾಜ್ಯ '(2015) 2 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 227 ಪ್ರಕರಣದಲ್ಲಿ ಸರ್ವೋಚ್‌ಚ ಚ ನ್ಯಾಯಾಲಯವು, ಅಂಕುಶ್ರವರ ಪ್ರಕರಣದ ಮೊದಲಿನ ತೀರ್ಪನ್ನು ಉಲ್ಲೇಖಿಸಿ, ಮಧ್ಯಂತರ ಪರಿಹಾರವನ್ನು ಸಂದಾಯ ಮಾಡಬೇಕಾಗಿದ್ದರೂ ಸಹ, ಸಂತ್ರಸ್ತರಿಗೆ ಪರಿಹಾರದ ಸಾಕಷ್ಟು ಗರಿಷ್ಠಮಟ್ಟವನ್ನು ನೀಡುವ ಮೂಲಕ ಸರ್ಕಾರವು ಸುತಸ್ತರಿಗೆ ಪುನರ್ವ್ಯವಸ್ಥೆಯನ್ನು ಮಾಡಬೇಕಾಗುತ್ತದೆಯೆಂದು ಅಭಿಪ್ರಾಯಪಟ್ಟಿದೆ.29 ರಾಜ್ಯಗಳ ಪೈಕಿ 25 ರಾಜ್ಯಗಳು ಸಂತ್ರಸ್ತ ಪರಿಹಾರ ಯೋಜನೆಗಳನ್ನು ಅಧಿಸೂಚಿಸಿದ್ದು, ಪರಿಹಾರವನ್ನು ದಂಡ ಪ್ರಕ್ರಿಯಾ ಸಂಹಿತೆಯ 357 ಎ ಪ್ರಕರಣದ ಉಪಬಂಧಗಳ ಪರಿಭಾಷೆಯಲ್ಲಿ ನ್ಯಾಯಿಕ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡು ಇತ್ಯರ್ಥದಲ್ಲಿರುವ ಪ್ರತಿಫಲವನ್ನು ಹೆಚ್ಚಿನ ಪರಿಷ್ಕರಣೆಯ ನಷ್ಟ ಪರಿಹಾರ ಶ್ರೇಣಿಯ ಜಾರಿಗೆ ತರುವಂತೆ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನವನ್ನು ಹೊರಡಿಸಿದ್ದು, ಯಾವುದೇ ಇತರ ರಾಜ್ಯವು ನೀಡಿದ ಶ್ರೇಣಿಯು ಹೆಚ್ಚಾಗಿರುವ ಹೊರತು, ಎಲ್ಲಾ ರಾಜ್ಯಗಳು ಅದನ್ನು ಅಳವಡಿಸಿಕೊಳ್ಳುವುದು, ಯೋಜನೆಯನ್ನು ರೂಪಿಸಿರದ ರಾಜ್ಯಗಳಿಗೆ ಅದನ್ನು ರೂಪಿಸಿಕೊಳ್ಳಲು ನಿರ್ದೇಶಿಸಿದ್ದು, ಹಿಂದಿನ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳಿನೊಳಗೆ ತಮ್ಮ ಯೋಜನೆಗಳನ್ನು ಅಧಿಸೂಚಿಸಲು ನಿರ್ದೇಶನವನ್ನು ಹೊರಡಿಸಿದೆ.ಅಷ್ಟೇ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳ ಮೇರೆಗೆ ಪರಿಹಾರವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರದಲ್ಲಿನ ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ ತಲುಪಿಸಲು ರಾಷ್ಟ್ರೀಯ ನ್ಯಾಯಿಕ ಅಕಾಡೆಮಿಗೆ ತೀರ್ಪಿನ ಪ್ರತಿಯನ್ನು ಕಳುಹಿಸಲು ಸೂಚಿಸಲಾಗಿದೆ.ಸರ್ವೋಚ್ಚ ನ್ಯಾಯಾಲಯವು, ಸದರಿ ತೀರ್ಪಿನಲ್ಲಿ, ಅಪರಾಧ ನಡೆದ ಕೂಡಲೇ ಸಂತ್ರಸ್ತರ ಆರ್ಥಿಕ ಅಗತ್ಯವನ್ನು ಸ್ಪಷ್ಟಪಡಿಸುವುದು ಹಾಗೂ ಸಂತ್ರಸ್ತರ ಅರ್ಜಿಯನ್ನು ಗಣನೆಗೆ ತೆಗೆದುಕೊಳ್ಳದೆ ತನ್ನ ಸ್ವಂತ ಕೋರಿಕೆಯಂತೆ ಮಧ್ಯಂತರ ಪರಿಹಾರವನ್ನು ನೀಡಲು ಸೂಚಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ ಎಂದೂ ಸಹ ಅಭಿಪ್ರಾಯಪಟ್ಟಿದೆ.ಅಷ್ಟೇ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯ 357 ಎ ಪ್ರಕರಣದ ಪ್ರಸ್ತುತ ಉದ್ದೇಶ ಯಾವುದೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ಮೇರೆಗೆ ಸಂದಾಯವಾದ ಪರಿಹಾರವು ಸಾಕಷ್ಟಿಲ್ಲದಿದ್ದಲ್ಲಿ ಅಥವಾ ಪ್ರಕರಣವನ್ನು ಖುಲಾಸೆಗೊಳಿಸಿ ಅಥವಾ ಬಿಡುಗಡೆ ಮಾಡಿ ಮುಕ್ತಾಯಗೊಳಿಸಿದಲ್ಲಿ ಹಾಗೂ ಸಂತ್ರಸ್ತರನ್ನು ಪುನರ್ವ್ಯವಸ್ಥೆಗೊಳಿಸಬೇಕಾಗಿದ್ದಲ್ಲಿ, ಸಂತ್ರಸ್ತರಿಗೆ ನಷ್ಟಪರಿಹಾರವನ್ನು ಸಂದಾಯ ಮಾಡುವುದಾಗಿದೆಯೆಂದು ಅಭಿಪ್ರಾಯಪಟ್ಟಿದೆ.

43. ದಂಡ ಪಕ್ರಿಯಾ ಸಂಹಿತೆಯ 357 ಎ ಪ್ರಕರಣದ ಉಪಬಂಧಗಳ ಪ್ರಾಥಮಿಕ ಉದ್ದೇಶವೇನೆಂದರೆ, ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ಮೇರೆಗೆ ನೀಡಿದ ಪರಿಹಾರವು, ಪ್ರಕರಣವನ್ನು ಖುಲಾಸೆಗೊಳಿಸುವ ಅಥವಾ ಫೈಸಲು ಮಾಡಿದೆ ಎಂದು ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳದೆ ನೀಡಿದ ಪರಿಹಾರವು ಸಾಕಷ್ಟಿರದಿದ್ದಲ್ಲಿ ಹಾಗೂ ಸಂತ್ರಸ್ತರಿಗೆ ಪುನರ್ವ್ಯವಸ್ಥೆಗೊಳಿಸಬೇಕಾಗಿದ್ದಲ್ಲಿ, ಸಂತ್ರಸ್ತರಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡುವುದನ್ನು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲು ನ್ಯಾಯಾಲಯವನ್ನು ಶಕ್ತಗೊಳಿಸುವುದಾಗಿದೆ.357 ಎ ಪ್ರಕರಣದ ಉಪಬಂಧಗಳನ್ನು ಕೆ. ಜಯಚಂದ್ರ ರೆಡ್ಡಿಯವರ ಅಧ್ಯಕ್ಷತೆಯ ಕಾನೂನು ಆಯೋಗದ 1996 ನೇ ವರ್ಷದಲ್ಲಿ ಸಲ್ಲಿಸಿದ 154 ನೇ ವರದಿಯ ಶಿಫಾರಸ್ಸಿನ ಮೇಲೆ ದಂಡ ಪ್ರಕ್ರಿಯಾ ಸಂಹಿತೆಯೊಳಗೆ ಸಂಯೋಜಿಸಲಾಗಿದೆ.ಅಪರಾಧ ನ್ಯಾಯ ಪದ್ಧತಿಯನ್ನು (ಕ್ರಿಮಿನಲ್ ಜಸ್ಟೀಸ್ ಸಿಸ್ಟಮ್) ಪರಿಷ್ಕರಿಸಲು, ನ್ಯಾಯಮೂರ್ತಿ ವಿ.ಎಸ್. ಮಳೀಮಠರವರ ಅಧ್ಯಕ್ಷತೆಯ ಸಮಿತಿಯು ಅಪರಾಧದ ಸಂತ್ರಸ್ತರಿಗೆ ನ್ಯಾಯವನ್ನು ಖಚಿತಪಡಿಸಲು ತನ್ನ ಶಿಫಾರಸ್ಸನ್ನು ಮಾಡಿದ್ದು 2003 ನೇ ವರ್ಷದಲ್ಲಿ ವರದಿಯನ್ನು ಸಲ್ಲಿಸಿತು.

44. ಸರ್ವೋಚ್ಚ ನ್ಯಾಯಾಲಯವು, ಸುರೇಶ್ರವರ ಪ್ರಕರಣದಲ್ಲಿ, 357 ನೇ ಪಕರಣದ ವ್ಯಾಪ್ತಿ ಮತ್ತು ಪರಿಧಿಯನ್ನು ಪರಿಗಣಿಸುವಾಗ ಸವಿವರವಾಗಿ ಚರ್ಚಿಸಿದೆ, ಹಾಗೆಯೇ ಕಾನೂನು ಆಯೋಗದ 154 ನೇ ವರದಿಯು ಮಾಡಿದ ಶಿಫಾರಸ್ಸನ್ನು ಪರಗಣಿಸಿದೆ ಹಾಗೂ ಸಂತ್ರಸ್ತರಿಗೆ ನಷ್ಟಪರಿಹಾರವನ್ನು ನೀಡುವಾಗ ಸದರಿ ಶಿಫಾರಸ್ಸನ್ನು ಗಮನಕ್ಕೆ ತೆಗೆದುಕೊಂಡಿದೆ.

45. ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 22.02.2012 ರ ಅಧಿಸೂಚನೆಯನ್ನು ಹೊರಡಿಸುವಾಗ, ನಷ್ಟಪರಿಹಾರವನ್ನು ಹೆಚ್ಚಿಸುವ ಅನುಸೂಚಿಗೆ ಜೋಡಿಸಲಾಗಿದ್ದು, ಸುರೇಶ್ ಪ್ರಕರಣದಲ್ಲಿ ಮೇಲೆ ಉಲ್ಲೇಖಿಸಲಾದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 57 ಎ ಪ್ರಕರಣದ ಉಪಬಂಧಗಳ ಪರಿಭಾಷೆಯಲ್ಲಿ ಪರಿಹಾರವನ್ನು ನಿಗದಿಪಡಿಸುವ ವಿಷಯದಲ್ಲಿ ರಾಜ್ಯಗಳ ನಡುವೆ ಸಾಮ್ಯತೆಯಿರಬೇಕೆಂದು ಅಭಿಪ್ರಾಯಪಟ್ಟಿದೆ ಹಾಗೂ ಪರಿಹಾರವನ್ನು ನೀಡುವಲ್ಲಿ ಸ್ವೇಚ್ಛಾನುಸಾರ ಇರಬಾರದೆಂದು ಹಾಗೂ ಯಾವುದೇ ಇತರ ರಾಜ್ಯವು ನೀಡಿದ ಶ್ರೇಣಿಯು ಹೆಚ್ಚಾಗಿರದ ಹೊರತು, ಕೇರಳ ರಾಜ್ಯವು ಅಧಿಸೂಚಿಸಿದ ಯೋಜನೆಯನ್ನು ಅಳವಡಿಸಿಕೊಂಡು ಸಮುಚಿತ ಯೋಜನೆಯನ್ನು ರೂಪಿಸಬೇಕೆಂದು ಎಲ್ಲಾ ರಾಜ್ಯಗಳಿಗೆ ನಿರ್ದೇಶನಗಳನ್ನು ನೀಡಿದೆ ಹಾಗೂ ಕರ್ನಾಟಕ ರಾಜ್ಯವು ಮೇಲೆ ಉಲ್ಲೇಖಿಸಲಾದ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಿದೆ.

46. ಸರ್ವೋಚ್ಚ ನ್ಯಾಯಾಲಯವು, ಅಂಕುಶ್ ಪ್ರಕರಣದಲ್ಲಿ ಹಾಗೂ ಸುರೇಶ್ ಚ ಪ್ರಕರಣದಲ್ಲಿ, ಪ್ರಕರಣವು ಖುಲಾಸೆಗೊಂಡಿದೆಯೇ ಅಥವಾ ಫೈಸಲಾಗಿದೆಯೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ನಷ್ಟ ಪರಿಹಾರವನ್ನು ನೀಡಬೇಕೆಂಬುದನ್ನು ಸ್ಪಷ್ಟಪಡಿಸಿದೆ.357 ನೇ ಪ್ರಕರಣದ ಮೇರೆಗೆ ಕ್ರಿಮಿನಲ್ ನ್ಯಾಯಾಲಯಗಳು ಹೊಣೆಗಾರಿಕೆಯನ್ನು ನಿರ್ವಹಿಸುವುದು ಶಾಸನಬದ್ಧ ಹೊಣೆಗಾರಿಕೆಯಾಗಿದ್ದು ಕ್ರಿಮಿನಲ್ ನ್ಯಾಯಾಲಯಗಳು, ಕರ್ನಾಟಕ ಸರ್ಕಾರವು ಗೃಹಾಡಳಿತ ಇಲಾಖೆ (ಅಪರಾಧಗಳು) ಪ್ರಕಾರ ಅಗತ್ಯ ಪರಿಹಾರವನ್ನು ನೀಡುವಾಗ ಮಾತ್ರ ತಪ್ಪದೆ ಅದರ ಉದ್ದೇಶಗಳು ಹಾಗೂ ಅರ್ಥವ್ಯಾಪ್ತಿಯನ್ನು ನೆರವೇರಿಸಬಹುದು.

47, ಕಾನೂನು ಆಯೋಗದ 154 ನೇ ವರದಿಯ ಶಿಫಾರಸು ಹಾಗೂ ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ವಿಧಿಸಲಾದ ತತ್ವಗಳನ್ನು ಗಮನಕ್ಕೆ ತೆಗೆದುಕೊಂಡು, ಅಧಿವಿಚಾರಣಾ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣ ತಿದ್ದುಪಡಿಯಾದ 357 ಎ ಪ್ರಕರಣದ ಪ್ರಸ್ತುತ ಉದ್ದೇಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹಾಗೂ ಸೂಕ್ತ ಪರಿಹಾರವನ್ನು ನೀಡಲು ನ್ಯಾಯಿಕ ಅಧಿಕಾರಗಳನ್ನು ಚಲಾಯಿಸಬೇಕೆಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.ರಾಜ್ಯವನ್ನು ಪ್ರತಿನಿಧಿಸುವ ಎಲ್ಲಾ ಸರ್ಕಾರಿ ಅಭಿಯೋಜಕರು ಅಪರಾಧದ ಸ್ವರೂಪ, ಅಪರಾಧದ ತೀವ್ರತೆಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳಿಗೆ ತಿಳಿಸಿಕೊಡುವುದು ಹಾಗೂ ಆಪಾದಿತನಿಗೆ ಸೂಕ್ತ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆಯೆಂಬುದನ್ನು ಅವರು ನೋಡುವ ಪ್ರಯತ್ನ ಮಾಡಬೇಕಾಗುತ್ತದೆಯೆಂಬುದು ಸಹ ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.ಕರ್ನಾಟಕ ಪ್ರಾಸಿಕ್ಯೂಷನ್ ಆಂಡ್ ಗವರ್ಮೆಂಟ್ ಲಿಟಿಗೇಷನ್ ಆಫ್ ಡೈರೆಕ್ಟರ್, ಬೆಂಗಳೂರು, ಇವರೂ ಕೂಡ, ಸೂಕ್ತ ಪರಿಹಾರವನ್ನು ನೀಡಲು, ಅಷ್ಟೇ ಅಲ್ಲ ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ಪರಿಭಾಷೆಯಲ್ಲಿ, ಆದರೆ ದಂಡ ಪ್ರಕ್ರಿಯಾ ಸಂಹಿತೆಯ 357 ಎ ಪ್ರಕರಣದ ಪರಿಭಾಷೆಯಲ್ಲಿಯೂ ಕೂಡ ನ್ಯಾಯಾಲಯಗಳಲ್ಲಿ ಪರಿಣಾಮಕಾರಿಯಾಗಿ ಪ್ರತಿನಿಧಿಸಲು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ

ಎಲ್ಲಾ ಸರ್ಕಾರಿ ಅಭಿಯೋಜಕರಿಗೆ ಇರುವ ಹೊಣೆಗಾರಿಕೆಯನ್ನು ವಿಧಿಸುವ ಅಗತ್ಯ ಸುತ್ತೋಲೆಯನ್ನು ಹೊರಡಿಸಲು ಸಹ ನಿರ್ದೇಶಿತರಾಗಿದ್ದಾರೆ.

48. ಶಾಸನದ ಪ್ರಸ್ತುತ ಉದ್ದೇಶವನ್ನು ಇಟ್ಟುಕೊಂಡು ಸಂತ್ರಸ್ತ ಪರಿಹಾರದ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ ನ್ಯಾಯಿಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಧೀಶರಿಗೆ ಅಗತ್ಯ ಸುತ್ತೋಲೆಗಳನ್ನು ಹೊರಡಿಸಲು ಹಾಗೂ ಸಂತ್ರಸ್ತರಿಗೆ ಯುಕ್ತ ಪರಿಹಾರವನ್ನು ನೀಡಲು ಈ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ರವರಿಗೆ ನಿರ್ದೇಶಿಸುವುದು ಸಹ ಅಗತ್ಯವಾಗಿದೆ.ಆಪಾದಿತನಿಗೆ ಶಿಕ್ಷೆ ನೀಡುತ್ತಿರುವಾಗ, ಆಪಾದಿತ ನೆಲೆಯಾಧಾರಿತ ನ್ಯಾಯವನ್ನು ಗಮನಿಸುವುದು ಹಾಗೂ ಅದು, ಶಬ್ದತಃ ಹಾಗೂ ಅಕ್ಷರಶಃ ಶಾಸನದ ಚಿಂತನೆಯಲ್ಲಿರುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ನ್ಯಾಯಾಲಯಗಳು ಸಂತ್ರಸ್ತ ಆಧಾರಿತ ನ್ಯಾಯವನ್ನು ಒದಗಿಸಲೂ ಸಹ ಪ್ರಯತ್ನ ಮಾಡಬೇಕು ಹಾಗೂ ಸಂತ್ರಸ್ತರಿಗೆ ಯುಕ್ತವಾದ ಪರಿಹಾರವನ್ನು ನೀಡಿದರೆ ಮಾತ್ರ ಇದನ್ನು ಮಾಡಬಹುದಾಗಿದೆ.ದಂಡನೆಯನ್ನು ವಿಧಿಸುವಾಗ, ನ್ಯಾಯಾಲಯಗಳು, ಅಪರಾಧಗಳ ಹಕ್ಕುಗಳನ್ನಷ್ಟೇ ಅಲ್ಲ, ಮುಖೇಶ್ –ವಿರುದ್ಧ ದೆಹಲಿಯ ಕೇಂದ್ರಾಡಳಿತ (NCT) ರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಅಭಿಪ್ರಾಯಪಟ್ಟಿರುವಂತೆ ಸಂತ್ರಸ್ತರ ಹಕ್ಕು ಹಾಗೂ ವ್ಯಾಪಕವಾಗಿ ಸಮಾಜವನ್ನೂ ಸಹ ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದೆ.

49. ಈ ಸಂಬಂಧದಲ್ಲಿ, ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳ ಮೇರೆಗೆ ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಕೆಳ ನ್ಯಾಯಾಲಯಗಳಿಗೆ ಕೆಲವು ಮಾರ್ಗಸೂಚಿಗಳನ್ನು ನೀಡಲು ಬಯಸುತ್ತದೆ.ಸಂತ್ರಸ್ತ ಪರಿಹಾರವನ್ನು ನೀಡುವಾಗ, ಪರಿಹಾರವನ್ನು ಸಂದಾಯಮಾಡಲು ಆಪಾದಿತನಿಗಿರುವ ಸಾಮರ್ಥ್ಯವನ್ನು ಸಹ ಗಮನಕ್ಕೆ ತೆಗೆದುಕೊಳ್ಳಬೇಕು.ಹೀಗಾಗಿ, ನ್ಯಾಯಯುತ ಹಾಗೂ ಯುಕ್ತವಾಗಿರುವಲ್ಲಿ ಪರಿಹಾರವನ್ನು ಸಂದಾಯಮಾಡಲು ಸರ್ಕಾರಕ್ಕೆ ನಿರ್ದೇಶಿಸುವುದನ್ನು ಸಹ ದಂಡ ಪ್ರಕ್ರಿಯಾ ಸಂಹಿತೆಯ 357 ಎ ಪ್ರಕರಣದ ಅಡಿಯಲ್ಲಿ ಬರುವ ಪ್ರಸ್ತುತ ಯೋಜನೆಯು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.ಸಂತ್ರಸ್ತ ಪರಿಹಾರವನ್ನು ಪರಿಣಾಮಕಾರಿ ಜಾರಿಗೊಳಿಸಲು ನ್ಯಾಯಿಕ ಅಧಿಕಾರಿಗಳು ಹಾಗೂ ಸರ್ಕಾರಿ ಅಭಿಯೋಜಕರಿಬ್ಬರೂ ಅನುಸರಿಸಲು ತೀರ್ಪಿನ ಪ್ರಧಾನ ಭಾಗದಲ್ಲಿ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

50. ನಮ್ಮ ಮುಂದಿರುವ ಪ್ರಸ್ತುತ ಪ್ರಕರಣದಲ್ಲಿ ಕೂಡ, ಘಟನೆಯಲ್ಲಿ ಸಂತ್ರಸ್ತರಿಗೆ ಮೂರು ಮುರಿತಗಳಾಗಿದ್ದರೂ ಮೂರು ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರೂ ಅಧಿವಿಚಾರಣಾ ನ್ಯಾಯಾಲಯವು 1,000/- ರೂ.ಗಳನ್ನು ಮಾತ್ರ ವಿಧಿಸಿದೆ ಹಾಗೂ ನಷ್ಟಪರಿಹಾರವನ್ನು ನೀಡಿರುವುದಿಲ್ಲ ಎಂಬುದನ್ನು ನಾವು ಗಮನಿಸಿದ್ದೇವೆ.ಅಧಿವಿಚಾರಣಾ ನ್ಯಾಯಾಲಯವು, ಕಾರಾವಾಸ ಶಿಕ್ಷೆಯನ್ನು ನೀಡುವಾಗ, ಪರಿಗಣಿಸಲು ಸದರಿ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ.ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 357 ನೇ ಪ್ರಕರಣದ ಮೇರೆಗೆ ಸಂತ್ರಸ್ತರ ಹೆಸರಿನಲ್ಲಿ ಯಾವುದೇ ಪರಿಹಾರವನ್ನು ನೀಡುವಲ್ಲಿ ವಿಫಲವಾಗಿದೆ.1999 ನೇ ವರ್ಷದಲ್ಲಿ ನಡೆದಿರುವ ಘಟನೆಯನ್ನು ಗಮನಕ್ಕೆ ತೆಗೆದುಕೊಂಡಾಗ ಬಹುತೇಕ 20 ವರ್ಷಗಳು ಕಳೆದುಹೋಗಿದ್ದು, ಎರಡು ವರ್ಷಗಳ ಅವಧಿಗೆ ಆಪಾದಿತನನ್ನು ಶಿಕ್ಷಿಸಿರುವುದು ಹೆಚ್ಚಾಗಿರುವಂತೆ ಕಂಡುಬರುತ್ತದೆ ಹಾಗೂ ಇದನ್ನು ಆರು ತಿಂಗಳುಗಳಿಗೆ ಇಳಿಸಿ ಇದನ್ನು ಸರಿದೂಗಿಸಬಹುದಾಗಿದ್ದು ಸಂತ್ರಸ್ತನಿಗೆ

ಸಂತ್ರಸ್ತ ಪರಿಹಾರವನ್ನು ಸಹ ನೀಡಬಹುದಾಗಿದೆ.ಹೀಗಾಗಿ ಕಾರಾವಾಸ ಶಿಕ್ಷೆಯನ್ನು ಎರಡು ವರ್ಷಗಳಿಂದ ಆರು ತಿಂಗಳುಗಳಿಗೆ ಇಳಿಸುವುದು ಯುಕ್ತವಾಗಿರುತ್ತದೆ.

51. ಮೇಲಿನ ಚರ್ಚೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈ ಮುಂದಿನ ಆದೇಶವನ್ನು ಹೊರಡಿಸಿದ್ದೇವೆ:

ಆದೇಶ

1) ರಾಜ್ಯವು ಸಲ್ಲಿಸಿದ ಅಪೀಲನ್ನು ಪುರಸ್ಕರಿಸಲಾಗಿದೆ.2006 ರ ಕ್ರಿಮಿನಲ್ ಅಪೀಲು ಸಂ .45 ರಲ್ಲಿ ಅಪೀಲು ನ್ಯಾಯಾಲಯವು ಹೊರಡಿಸಿದ ದಿನಾ ಂ ಕ 14.02.2013 ರ ತೀರ್ಪನ್ನು ತಿರಸ್ಕರಿಸಲಾಗಿದೆ.

1) ಸಿ.ಸಿ.ಸಂ .27/2004 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ 20.01.2006 ರ ಅಪರಾಧನಿರ್ಣಯದ ತೀರ್ಪನ್ನು, ಅಪರಾಧನಿರ್ಣಯವನ್ನು ದೃಢಪಡಿಸಿ ಪುನರ್ ಸ್ಥಾಪಿಸಲಾಗಿದೆ.

iii) ಭಾರತ ದಂಡ ಸಂಹಿತೆಯ 326 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಗಳಿಗಾಗಿ 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರಿಗೆ ಅಪರಾಧ ನಿರ್ಣಯ ಮಾಡಲಾಗಿದೆ ಹಾಗೂ ಆರು ತಿಂಗಳುಗಳ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೊಳಪಡಿಸುವ ಶಿಕ್ಷೆಯನ್ನು ಮಾರ್ಪಾಡು ಮಾಡಲಾಗಿದೆ ಹಾಗೂ ಪ್ರಾ.ಸಾ .2 ಕ್ಕೆ ಪ್ರತಿಯೊಬ್ಬರೂ 50,000/- ರೂ. ಜುಲ್ಮಾನೆಯನ್ನು ಸಂದಾಯ ಮಾಡಲು ನಿರ್ದೇಶಿಸಲಾಗಿದೆ.ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಪ್ರತಿಯೊಬ್ಬ ಆಪಾದಿತನನ್ನು ಒಂದು ವರ್ಷದ ಹೆಚ್ಚಿನ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡಿಸುವುದು.

iv) 1 ನೇ ಹಾಗೂ 2 ನೇ ಸಂಖ್ಯೆಯ ಆಪಾದಿತರನ್ನು ಭಾರತ ದಂಡ ಸಂಹಿತೆಯ 324 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ನಿರ್ಣಯ ಮಾಡಲಾಗಿದ್ದು, ಪ್ರತಿಯೊಬ್ಬರೂ 5,000/- ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಶಿಕ್ಷೆ ನೀಡಿದ್ದು ಇದನ್ನು ರಾಜ್ಯದೊಂದಿಗೆ ನಿಹಿತಗೊಳಿಸತಕ್ಕದ್ದು.ಜುಲ್ಮಾನೆ ಮೊತ್ತವನ್ನು ಸಂದಾಯ ಮಾಡಿದರೆ ಸಾದಾ ಕಾರಾವಾಸ ಶಿಕ್ಷೆಯನ್ನು ವಿಧಿಸಲಾಗಿಲ್ಲ.

v) ಅಧಿವಿಚಾರಣೆಯ ಅವಧಿಯಲ್ಲಿ ಆಪಾದಿತ ವ್ಯಕ್ತಿಗಳನ್ನು ವಶಕ್ಕೆ ತೆಗೆದುಕೊಂಡಿದ್ದರೆ, ದಂಡ ಪ್ರಕ್ರಿಯಾ ಸಂಹಿತೆಯ 428 ನೇ ಪ್ರಕರಣದ ಮೇರೆಗೆ ವಜಾವಟ್ಟು ಮಾಡುವ ಪ್ರಯೋಜನಕ್ಕೆ ಅವರು ಹಕ್ಕುಳ್ಳವರಾಗಿರುವರು ಎಂಬುದು ರಾಜ್ಯಕ್ಕೆ ಅನವಶ್ಯಕವಾದುದಾಗಿದೆ.

ಈ ಪ್ರಕರಣವನ್ನು, ಇತ್ಯರ್ಥಪಡಿಸುವ ಮೊದಲು, ಶಾಸನದ ಧ್ಯೆಯೋದ್ದೇಶ, ಉದ್ದೇಶ ಹಾಗೂ ಚಿಂತನೆಯನ್ನು ಗಮನದಲ್ಲಿಟ್ಟುಕೊಂಡು ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳನ್ನು ಅನುಸರಿಸಲು ನ್ಯಾಯಿಕ ಅಧಿಕಾರಿಗಳಿಗೆ ಹಾಗೂ ಸರ್ಕಾರಿ ಅಭಿಯೋಜಕರಿಗೆ ಮಾರ್ಗದರ್ಶಿಗಳನ್ನು ಹೊರಡಿಸುವುದು ಅಗತ್ಯವೆಂದು ನಾವು ಭಾವಿಸುತ್ತೇವೆ.

51. ಆಪಾದಿತ ವ್ಯಕ್ತಿಗಳನ್ನು ಶಿಕ್ಷಿಸುವಾಗ ಈ ಮುಂದಿನ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಳ್ಳಲು ಅಧಿವಿಚಾರಣಾ ನ್ಯಾಯಾಲಯ ನ್ಯಾಯಾಧೀಶರಿಗೆ ನಿರ್ದೇಶಿಸಲಾಗಿದೆ:

1) ಶಿಕ್ಷೆ ವಿಧಿಸುವಾಗ ಜುಲ್ಮಾನೆಯನ್ನು ಸಂದಾಯಮಾಡುವ ಆಪಾದಿತನ ಎ ಸಾಮರ್ಥ್ಯವನ್ನು ಪರಿಗಣಿಸಲು ನ್ಯಾಯಾಲಯಗಳಿಗೆ ನಿರ್ದೇಶಿಸಲಾಗಿದೆ ಹಾಗೂ ಆಪಾದಿತನು ಜುಲ್ಮಾನೆ ಮೊತ್ತವನ್ನು ಸಂದಾಯಮಾಡುವ ಸಾಮರ್ಥ್ಯ ಹೊಂದಿದ್ದರೆ, ಯುಕ್ತ ಜುಲ್ಮಾನೆ ಹಾಗೂ ಪರಿಹಾರದ ಆದೇಶವನ್ನು ಹೊರಡಿಸುವುದು.

ii) ಆಪಾದಿತನು ಪರಿಹಾರವನ್ನು ಸಂದಾಯ ಮಾಡಲು ಸಮರ್ಥನಾಗಿರದಿದ್ದರೆ, ಆಗ, ದಿನಾಂಕ 22.02.2012 ರ ಅಧಿಸೂಚನೆಯ ಪರಿಭಾಷೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಸೃಜಿಸಿದ ಸಂಚಯದಂತೆ ಯುಕ್ತ ಪರಿಹಾರವನ್ನು ನೀಡುವುದಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ವಿಷಯವನ್ನು ಸೂಚಿಸುವುದು ಅಥವಾ ಕಳುಹಿಸುವುದು.

iii) ಅಧಿವಿಚಾರಣಾ ನ್ಯಾಯಾಲಯ ನ್ಯಾಯಾಧೀಶರು, ಪರಿಹಾರದ ಆದೇಶವನ್ನು ಮಾತ್ರ ಹೊರಡಿಸತಕ್ಕದ್ದಷ್ಟೆ ಅಲ್ಲ, ಸರ್ವೋಚ್ಚ ನ್ಯಾಯಾಲಯವು ಅಂಕುಶ್ ಹಾಗೂ ಚ ಸುರೇಶ್ (ಮೇಲೆ ಉದ್ಧರಿಸಲಾದ) ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವಂತೆ ಸಂತ್ರಸ್ತರಿಗೆ ಪುನರ್ವ್ಯವಸ್ಥೆಯ ಮಧ್ಯಂತರ ಆದೇಶವನ್ನೂ ಸಹ ಮಾಡತಕ್ಕದ್ದು.

iv) ಅಧಿವಿಚಾರಣಾ ನ್ಯಾಯಾಲಯ ನ್ಯಾಯಾಧೀಶರು, ಯುಕ್ತ ನಷ್ಟಪರಿಹಾರವನ್ನು ನೀಡುವಾಗ ಹಾಗೂ ಮಧ್ಯಂತರ ಪುನರ್ವ್ಯವಸ್ಥೆ ಆದೇಶವನ್ನು ಹೊರಡಿಸುವಾಗ ಅಪರಾಧಗಳ ತೀವ್ರತೆಯನ್ನು, ಗಾಯಗಳ ಸ್ವರೂಪವನ್ನು ಗಮನದಲ್ಲಿಟ್ಟು ಕೊಳ್ಳತಕ್ಕದ್ದು ಹಾಗೂ ಚಿಕಿತ್ಸೆಗೆ ಖರ್ಚು ಮಾಡಿದ ಮೊತ್ತವು ನ್ಯಾಯಯುತ ಹಾಗೂ ಯುಕ್ತವಾಗಿರತಕ್ಕದ್ದು ಹಾಗೂ ಅತಿಯಾಗತಕ್ಕದ್ದಲ್ಲ.ಮತ್ತೊಂದು ರೀತಿಯಲ್ಲಿ ಪರಿಹಾರವು ಅಪರಾಧದ ತೀವ್ರತೆಗೆ ಪ್ರಮಾಣಾನುಸಾರವಾಗಿರಬೇಕು.

52. ಆಪಾದಿತ ವ್ಯಕ್ತಿಗಳಿಗೆ ಶಿಕ್ಷೆಯನ್ನು ನೀಡಲು ನ್ಯಾಯಾಲಯಕ್ಕೆ ನೆರವು ನೀಡುವಾಗ ಸರ್ಕಾರಿ ಅಭಿಯೋಜಕರು ಮುಂದಿನ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಳ್ಳಲು ಅವರಿಗೆ ನಿರ್ದೇಶಿಸಲಾಗಿದೆ.

1) ಸರ್ಕಾರಿ ಅಭಿಯೋಜಕರು ಜುಲ್ಮಾನೆ ಹಾಗೂ ಪರಿಹಾರವನ್ನು ವಿಧಿಸಲು ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳನ್ನು ಅಕ್ಷರಶಃ ಹಾಗೂ ಶಬ್ದಶಃ ಸಂಬಂಧಪಟ್ಟ ನ್ಯಾಯಾಲಯಗಳನ್ನು ಕೋರತಕ್ಕದ್ದು.

ii) ಅಧಿವಿಚಾರಣಾ ನ್ಯಾಯಾಲಯಗಳು ಆಪಾದಿತನು ಜುಲ್ಮಾನೆ ಅಥವಾ ಪರಿಹಾರ ಮೊತ್ತವನ್ನು ಸಂದಾಯ ಮಾಡಲು ಸಮರ್ಥನಾಗಿದ್ದಾನೆಯೇ ಎಂಬುದನ್ನು ನಿರ್ಧರಿಸಬೇಕು.ಹಾಗಿಲ್ಲದಿದ್ದರೆ, ಅದನ್ನು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಕಳುಹಿಸಬೇಕಾಗುತ್ತದೆ.

ii) ಮಾನ್ಯ ಸರ್ಕಾರಿ ಅಭಿಯೋಜಕರು, ಸರ್ವೋಚ್ಚ ನ್ಯಾಯಾಲಯವು ಅಂಕುಶ್ ಹಾಗೂ ಸುರೇಶ್ (ಮೇಲೆ ಉದ್ಧರಿಸಲಾದ) ಪ್ರಕರಣಗಳಲ್ಲಿ ತೀರ್ಮಾನಿಸಲಾದಂತೆ ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳ ಪ್ರಸ್ತುತ ಉದ್ದೇಶವನ್ನು ಈಡೇರಿಸುವ ಸಲುವಾಗಿ ಸಂತ್ರಸ್ತರಿಗೆ ಪುನರ್ವ್ಯವಸ್ಥೆ ಕಲ್ಪಿಸುವ ಮಧ್ಯಂತರ ಏರ್ಪಾಟುಗಳನ್ನು ಮಾಡಲು ನ್ಯಾಯಾಲಯದ ಮುಂದೆ ಅಗತ್ಯ ಮನವಿಯನ್ನು ಸಹ ಮಾಡತಕ್ಕದ್ದು.

53. ದಂಡ ಪ್ರಕ್ರಿಯಾ ಸಂಹಿತೆಯ 357 ಹಾಗೂ 357 ಎ ಪ್ರಕರಣಗಳ ಧ್ಯೇಯ ಹಾಗೂ ಉದ್ದೇಶವನ್ನು ಈಡೇರಿಸುವ ಸೂಚನೆಯೊಂದಿಗೆ ರಾಜ್ಯದ ಎಲ್ಲಾ ನ್ಯಾಯಿಕ ಅಧಿಕಾರಿಗಳಿಗೆ ಈ ತೀರ್ಪನ್ನು ಪರಿಚಲಿಸಲು ರಿಜಿಸ್ಟ್ರಾರ್ ಜನರಲ್ರವರು ನಿರ್ದೇಶಿತರಾಗಿದ್ದಾರೆ ಹಾಗೂ ಪ್ರಾಸಿಕ್ಯೂಷನ್ನ ನಿರ್ದೇಶಕರು, ರಾಜ್ಯ ಸರ್ಕಾರಿ ಅಭಿಯೋಜಕರನ ಅಭಿಯೋಜಕರನ್ನೂ ಒಳಗೊಂಡಂತೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಭಿಯೋಜಕರಿಗೆ ಇದನ್ನು ಪರಿಚಲಿಸಲು ನಿರ್ದೇಶಿತರಾಗಿದ್ದಾರೆ.